ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಡಿಸೆಂಬರ್ 17, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 215 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999


## ವೀರಶೈವ - ಲಿಂಗಾಯತ ಒಳಪಂಗಡಗಳು ಒಂದಾಗಲು ಏಕರೀತಿ ಮೀಸಲಾತಿ ಅವಶ್ಯ



### ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸಮಾಜದ ಕಾರ್ಯಕ್ರಮದಲ್ಲಿ ಶ್ರೀಶೈಲ ಜಗದ್ಗುರುಗಳು

ದಾವಣಗೆರೆ, ಡಿ. 16- ವೀರಶೈವ ಮತ್ತು ಲಿಂಗಾಯತ ಒಳಪಂಗಡಗಳು ಒಗ್ಗೂಡಲು ಏಕರೀತಿ ಮೀಸಲಾತಿ ಜಾರಿ ಅವಶ್ಯ ಎಂದು ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ನಗರದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಇಂದು ಹಮ್ಮಿಕೊಂಡಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸಮಾಜದಿಂದ ನಿರ್ಮಾಣಗೊಂಡಿರುವ ವಿದ್ಯಾರ್ಥಿ ನಿಲಯದ ಉದ್ಘಾಟನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಮಾತನಾಡಿದರು.

ಇದೇ ದಿನಾಂಕ 23 ಮತ್ತು 24 ರಂದು ಎರಡು ದಿನಗಳ ಕಾಲ ದಾವಣಗೆರೆಯಲ್ಲಿ ನಡೆಯುವ ಅಖಿಲ ಭಾರತ ವೀರಶೈವ ಮಹಾಸಭಾ ಅಧಿವೇಶನದಲ್ಲಿ ವೀರಶೈವ-ಲಿಂಗಾಯತ ಸಮಾಜದ ಒಳಪಂಗಡಗಳನ್ನು ಒಬಿಸಿ ಪಟ್ಟಿಯಲ್ಲಿ ಸೇರಿಸುವಂತೆ ರಾಜ್ಯ ಸರ್ಕಾರದಿಂದ ಶಿಫಾರಸ್ಸು ಮಾಡಿಸಿ, ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಮೂಲಕ ಒತ್ತಡ ತರಲು ನಿರ್ಣಯ ಕೈಗೊಳ್ಳಬೇಕೆಂಬ ಸಲಹೆಯನ್ನು ಶ್ರೀಗಳು ನೀಡಿದರು.

ಜಾತಿ ಗಣತಿಯಲ್ಲಿ ರಾಜ್ಯದಲ್ಲಿರುವ ಎರಡು ಕೋಟಿ ಜನಸಂಖ್ಯೆ ಇರುವ ವೀರಶೈವ-ಲಿಂಗಾಯತ ಸಮುದಾಯವನ್ನು 70 ಲಕ್ಷಕ್ಕೆ ಸೀಮಿತಗೊಳಿಸಿರುವುದು ವಿಷಾದದ ಸಂಗತಿ ಎಂದರು.

ವೀರಶೈವ -ಲಿಂಗಾಯತ ಶಾಸಕರು ಪಕ್ಷಾತೀತವಾಗಿ ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿ ಮಾಡಿ ಕಾಂತರಾಜ್ ಆಯೋಗದ ಜಾತಿ ಗಣತಿ ವರದಿಯನ್ನು ತಿರಸ್ಕರಿಸುವಂತೆ ಮನವಿ ಮಾಡಿರುವುದಕ್ಕೆ ತಮ್ಮ ಬೆಂಬಲವಿದೆ ಎಂದು ಹೇಳಿದರು.

ಎರಡು ವರ್ಷಗಳ ಬಳಿಕ ಅವಶ್ಯವಿದ್ದಲ್ಲಿ ಮಾತ್ರ ವೈಜ್ಞಾನಿಕವಾಗಿ ಜಾತಿ ಗಣತಿಯನ್ನು ನಡೆಸಬೇಕಾಗಿದೆ ಎಂದು ಆಗ್ರಹಿಸಿದರು.

ಬಾಲೆಹೊಸೂರಿನ ಭಾವೈಕ್ಯತಾ ಮಹಾಸಂಸ್ಥಾನ ಪೀಠದ ಶ್ರೀ ಫಕೀರ ದಿಂಗಾಲೇಶ್ವರ ಸ್ವಾಮಿ ಮಾತನಾಡಿ, ಒಳಪಂಗಡಗಳ ಜಗಳದಲ್ಲಿ ವೀರಶೈವ-ಲಿಂಗಾಯತರು ವಿಘಟನೆಯಾಗುತ್ತಿರುವುದು ವಿಷಾದದ ಸಂಗತಿ ಎಂದರು. ಇನ್ನಾದರೂ ಒಳಪಂಗಡಗಳ ಭೇದ ಮರೆತು ಎಲ್ಲರೂ ಸಂಘಟಿತರಾಗೋಣ ಎಂದು ಸಲಹೆ ನೀಡಿದರು.

ವೀರಶೈವ ಸಮಾಜದ ಮುಖಂಡರು ತಮ್ಮ ದುಡಿಮೆಯ ಒಂದಿಷ್ಟು ಹಣದಲ್ಲಿ ವಿದ್ಯಾರ್ಥಿ ನಿಲಯವನ್ನು ಆರಂಭಿಸಿದರೆ ಮಕ್ಕಳು ಶಿಕ್ಷಣ ಪಡೆಯಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಮಠಾಧೀಶರು ಕೇವಲ ಲಿಂಗಾಯತ ಸಮುದಾಯವನ್ನು ಬೆಳೆಸಲಿಲ್ಲ. ಬದಲಾಗಿ ದಲಿತರನ್ನು ಒಳಗೊಂಡು ಎಲ್ಲಾ ಹಿಂದುಳಿದ ಸಮಾಜದವರನ್ನು ಬೆಳೆಸಿದರು. ಈಗ ಎಲ್ಲರ ಮಕ್ಕಳು (3ನೇ ಪುಟಕ್ಕೆ)

## ಕಾಂಗ್ರೆಸ್‌ನಿಂದ 'ದೇಶಕ್ಕಾಗಿ ದೇಣಿಗೆ'

### ಅಭಿಯಾನಕ್ಕೆ ನಾಳೆ ಮಲ್ಲಿಕಾರ್ಜುನ ಖರ್ಗೆ ಚಾಲನೆ

ನವದೆಹಲಿ, ಡಿ. 16 – ಮುಂಬರುವ 2024ರ ಲೋಕಸಭಾ ಚುನಾವಣೆಗೆ ಮುಂಚೆ ಸಂಪನ್ಮೂಲ ಸಂಗ್ರಹಿಸುವ ಸಲುವಾಗಿ 'ದೇಶಕ್ಕಾಗಿ ದೇಣಿಗೆ' ಎಂಬ ಅಭಿಯಾನ ನಡೆಸಲು ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ.

ಡಿಸೆಂಬರ್ 18ರಂದು ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹಾಗೂ ಖಜಾಂಚಿ ಅಜಯ್ ಮಾಕೆನ್, 18 ವರ್ಷ ಮೀರಿದ ಭಾರತೀಯರು ಕನಿಷ್ಠ 138 ರಿಂದ ದೇಣಿಗೆ ನೀಡಬಹುದು ಎಂದು ಹೇಳಿದರು.

138 ರೂ., 1380 ಹಾಗೂ 13,380 ಈ ರೀತಿ ಹೆಚ್ಚಿನ ಗುಣಾಕಾರದಲ್ಲಿ ದೇಣಿಗೆ ನೀಡಬಹುದು ಎಂದವರು ತಿಳಿಸಿದರು.

ಮಹಾತ್ಮ ಗಾಂಧೀಜಿ ಅವರ ಐತಿಹಾಸಿಕ 'ತಿಲಕ್ ಸ್ವರಾಜ್ ನಿಧಿ'ಯಿಂದ ಸ್ಫೂರ್ತಿ ಪಡೆದು ಈ ಅಭಿಯಾನ ರೂಪಿಸಲಾಗುತ್ತಿದೆ. ಸುಮಾರು ನೂರು ವರ್ಷಗಳ ಹಿಂದೆ 1920-21ರಲ್ಲಿ ಗಾಂಧೀಜಿ ಈ ಅಭಿಯಾನ ನಡೆಸಿದ್ದರು ಎಂದು ವೇಣುಗೋಪಾಲ್ ಹೇಳಿದರು. ಕಾಂಗ್ರೆಸ್ ಬಲಗೊಳಿಸಲು ಈ ಅಭಿಯಾನ ನಡೆಸಲಾಗುತ್ತಿದೆ ಎಂದವರು ಹೇಳಿದರು.

ಕಾಂಗ್ರೆಸ್ ಪಕ್ಷಕ್ಕೆ ಈಗ 138 ವರ್ಷಗಳಾಗಿವೆ. ಈ ಹಿನ್ನೆಲೆಯಲ್ಲಿ 'ಉತ್ತಮ ಭಾರತಕ್ಕಾಗಿ ದೇಣಿಗೆ ನೀಡಿ' ಅಭಿಯಾನವನ್ನು 138 ರೂ.ಗಳೊಂದಿಗೆ ಆರಂಭಿಸಲಾಗುತ್ತಿದೆ ಎಂದವರು ವಿವರಿಸಿದರು.

ಆನ್‌ಲೈನ್ ಮೂಲಕ ದೇಣಿಗೆ ನೀಡಲು ಎರಡು ವೆಬ್‌ಸೈಟ್‌ಗಳಲ್ಲಿ ವ್ಯವಸ್ಥೆ ಮಾಡಲಾಗುವುದು. donateinc.in ಹಾಗೂ inc.in ವೆಬ್‌ಸೈಟ್‌ಗಳಲ್ಲಿ ದೇಣಿಗೆಗೆ ಅವಕಾಶ ಇರಲಿದೆ.

ಪ್ರದೇಶ ಕಾಂಗ್ರೆಸ್ ಪಕ್ಷದ ಎಲ್ಲಾ ಅಧ್ಯಕ್ಷರು ಈ ಅಭಿಯಾನದ ಬಗ್ಗೆ ಅರಿವು ಮೂಡಿಸಲಿದ್ದಾರೆ. ಪಕ್ಷದ ಸ್ಥಾಪನಾ ದಿನವಾದ ಡಿಸೆಂಬರ್ 28ರವರೆಗೆ ಈ ಅಭಿಯಾನ ಆನ್‌ಲೈನ್ ಮೂಲಕ ನಡೆಯಲಿದೆ. ನಂತರ ಕಾರ್ಯಕರ್ತರು ಮನೆ ಮನೆಗೆ ತೆರಳಲಿದ್ದಾರೆ. ಪ್ರತಿ ಬೂತ್‌ನಲ್ಲಿ ಕನಿಷ್ಠ 10 ಮನೆಗಳಿಂದ ಕನಿಷ್ಠ 138 ರೂ. ಸಂಗ್ರಹಿಸುವ ಉದ್ದೇಶವಿದೆ ಎಂದವರು ತಿಳಿಸಿದರು.

ರಾಜ್ಯ ಹಂತದ ಪದಾಧಿಕಾರಿಗಳು, ಜನಪ್ರತಿನಿಧಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಎಐಸಿಸಿ ಅಧಿಕಾರಿಗಳು ಕನಿಷ್ಠ ತಲಾ 1380 ರೂ. ನೀಡಲಿದ್ದಾರೆ ಎಂದವರು ಹೇಳಿದರು.

## ಮಾನ್ಯತೆ ಪಡೆಯದ ವಿದೇಶಿ ವಿವಿ ಪದವಿ ಬೇಡ: ಯುಜಿಸಿ

ನವದೆಹಲಿ, ಡಿ. 16 - ತನ್ನಿಂದ ಮಾನ್ಯತೆ ಪಡೆಯದ ವಿದೇಶಿ ವಿಶ್ವವಿದ್ಯಾನಿಲಯಗಳ ಹೆಸರಿನಲ್ಲಿ ಪದವಿ ಪ್ರಮಾಣ ಪತ್ರಗಳನ್ನು ವಿತರಿಸದಂತೆ ಎಡ್‌ಟೆಕ್ ಕಂಪನಿ ಹಾಗೂ ಕಾಲೇಜುಗಳಿಗೆ ಯು.ಜಿ.ಸಿ. ಎಚ್ಚರಿಸಿದೆ.

ನಿಯಮ ಮೀರಿ ನೀಡಲಾಗುವ ಪದವಿಗಳಿಗೆ ಯಾವುದೇ ಮಾನ್ಯತೆ ಇರುವುದಿಲ್ಲ. ಇಂತಹ ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳೂ ಎಚ್ಚರವಾಗಿರಬೇಕು ಎಂದು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ (ಯು.ಜಿ.ಸಿ.) ತಿಳಿಸಿದೆ.

ಹಲವಾರು ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಕಾಲೇಜುಗಳು ವಿದೇಶಿ ಶಿಕ್ಷಣ ಸಂಸ್ಥೆಗಳ ಜೊತೆ ಕೈ ಜೋಡಿಸಿವೆ. ಆದರೆ, ಇವುಗಳು ಆಯೋಗದ ಮಾನ್ಯತೆ ಪಡೆದಿಲ್ಲ. ಆದರೂ ವಿದೇಶಿ ಪದವಿಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ ಎಂದು ಯು.ಜಿ.ಸಿ. ಕಾರ್ಯದರ್ಶಿ ಮನೀಶ್ ಜೋಷಿ ಹೇಳಿದ್ದಾರೆ.

ಈ ರೀತಿಯ ಸಹಭಾಗಿತ್ವ ಹಾಗೂ ವ್ಯವಸ್ಥೆಗಳಿಗೆ ಯು.ಜಿ.ಸಿ. ಮಾನ್ಯತೆ ಇಲ್ಲ. ಇಂತಹ (2ನೇ ಪುಟಕ್ಕೆ)

## ಭೈರನಪಾದ ಏತ ನೀರಾವರಿ ಯೋಜನೆಗೆ ಅನುದಾನ ನೀಡಿ

### ಬೆಳಗಾವಿ ಅಧಿವೇಶನದಲ್ಲಿ ಶಾಸಕ ಹರೀಶ್ ಮನವಿ



ಬೆಳಗಾವಿ, ಡಿ. 16- ಹರಿಹರ ತಾಲ್ಲೂಕಿನಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಮಹತ್ವದ ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೆ ಅನುದಾನ ನೀಡುವಂತೆ ಶಾಸಕ ಬಿ.ಪಿ. ಹರೀಶ್ ಅವರು ಬೆಳಗಾವಿ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆದಿದ್ದಾರೆ.

2013ರಲ್ಲಿ ಈ ಯೋಜನೆಗೆ ಅಂದಿನ ಸರ್ಕಾರದಿಂದ 58 ಕೋಟಿ ರೂ. ಅನುದಾನಕ್ಕೆ ಆಡಳಿತಾತ್ಮಕ ಒಪ್ಪಿಗೆ ಸಿಕ್ಕಿತ್ತು. ನಂತರ ತಾಂತ್ರಿಕ ಉಪ ಸಮಿತಿ ಯಲ್ಲಿ ಯೋಜನೆಗೆ ಹಸಿರು ನಿಶಾನೆ ನೀಡಲಾಗಿತ್ತು. ಆದರೆ. ನಂತರ ತಾಂತ್ರಿಕ ಸಲಹಾ ಸಮಿತಿ ಒಪ್ಪಿಗೆ ಹಾಗೂ ವಾಟರ್ ಅಲೋಕೇಷನ್ ಆಗಲಿಲ್ಲ.

ಭದ್ರಾ ಬಲದಂಡೆ ನಾಲೆಗೆ ಭದ್ರಾವತಿ, ಚನ್ನಗಿರಿ ತಾಲ್ಲೂಕಿನಲ್ಲಿ ಸಾವಿರಾರು ಅಕ್ರಮ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡಿರು ವುದರಿಂದ ಹರಿಹರ ತಾಲ್ಲೂಕಿನಲ್ಲಿರುವ ಭದ್ರಾ ಅಚ್ಚುಕಟ್ಟಿನ ಶೇ. 50ರಷ್ಟು (4ನೇ ಪುಟಕ್ಕೆ)

## ಐಎಎನ್‌ಎಸ್ ಸುದ್ದಿ ಸಂಸ್ಥೆ ಅದಾನಿ ತೆಕ್ಕೆಗೆ

ನವದೆಹಲಿ, ಡಿ. 16 - ಐ.ಎ. ಎನ್.ಎಸ್. ಇಂಡಿಯಾ ಖಾಸಗಿ ಸುದ್ದಿ ಸಂಸ್ಥೆಯ ಬಹುಮತದ ಪಾಲುಗಾರಿಕೆಯನ್ನು ಉದ್ಯಮಿ ಗೌತಮ್ ಅದಾನಿ ಅವರ ಸಮೂಹ ಖರೀದಿಸಿದೆ. ಅದಾನಿ ಎಂಟರ್ ಪ್ರೈಸ್ ಈ ಬಗ್ಗೆ ನಿಯಂತ್ರಕರ ಬಳಿ ವರದಿ ದಾಖಲಿಸಿದೆ. ಐ.ಎ.ಎನ್.ಎಸ್. ಇಂಡಿಯಾದ ಶೇ.50.50ರ ಪಾಲುಗಾರಿಕೆ ಖರೀದಿಸಿರುವುದಾಗಿ ತಿಳಿಸಲಾಗಿದೆ. ಖರೀದಿ ಬೆಲೆಯನ್ನು ಕಂಪನಿ ನಮೂದಿಸಿಲ್ಲ. (2ನೇ ಪುಟಕ್ಕೆ)


ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 16.12.2023ರ ಶನಿವಾರ ನಿಧನರಾದ
ದಾವಣಗೆರೆ ಜಿಲ್ಲಾ ಜೆಡಿಎಸ್ ಮಹಿಳಾ ಅಧ್ಯಕ್ಷರಾಗಿದ್ದ
ಶ್ರೀಮತಿ ಶೀಲಾ ಕುಮಾರ್
ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಕೋರಿ, ಮೃತರ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.
ದಾವಣಗೆರೆ ಜಿಲ್ಲಾ ಜೆಡಿಎಸ್ ಘಟಕ ಹಾಗೂ ಅಭಿಮಾನಿ ಬಳಗ, ದಾವಣಗೆರೆ



ಆಸ್ತಿ ಮಾರಾಟಕ್ಕಿದೆ

ಕಮರ್ಶಿಯಲ್ ಆಸ್ತಿ ಕೊಳ್ಳುವವರಿಗೆ ಸುವರ್ಣಾವಕಾಶ

- ಎರಡು ಪ್ರೈಮ್ ಜಾಗಗಳು, ನಗರದ ಮಧ್ಯ ಭಾಗದಲ್ಲಿವೆ.
- ಎರಡು ಸೇರಿ ಒಟ್ಟು 30 ಸಾವಿರ ಚದುರ ಅಡಿ ವಿಸ್ತೀರ್ಣ
- ಎರಡು ಸುಸಜ್ಜಿತ ಹೋಟೆಲ್‌ಗಳು, ಸಭಾಂಗಣಗಳು
- ಸ್ವಿಮ್ಮಿಂಗ್ ಪೂಲ್
- ಕಮರ್ಶಿಯಲ್ ಕಾಂಪ್ಲೆಕ್ಸ್ ಮತ್ತು ಮಳಿಗೆಗಳು
- ಬಾರ್ ಅಂಡ್ ರೆಸ್ಟೋರೆಂಟ್
- ಸಿ.ಎಲ್-7 ಲೈಸೆನ್ಸ್
- ಸರಿಯಾದ, ಶುದ್ಧ ಆಸ್ತಿ ದಾಖಲೆಗಳು

ಸಂಪರ್ಕಿಸಿ :
9611747002



ಹೊನ್ನಮ್ಮ ನಿಧನ
(ತರಕಾರಿ ವ್ಯಾಪಾರಿಗಳು)



ದಾವಣಗೆರೆ ಹೊಂಡದ ಸರ್ಕಲ್ ಬಳಿಯ ವಾಸಿ, ದಿ. ಶ್ರೀ ನಾಗಪ್ಪನವರ ಧರ್ಮಪತ್ನಿ
ಶ್ರೀಮತಿ ಹೊನ್ನಮ್ಮ (ತರಕಾರಿ ವ್ಯಾಪಾರಿಗಳು)
ಇವರು, ದಿನಾಂಕ : 16.12.2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೂವರು ಗಂಡು ಮಕ್ಕಳು, ನಾಲ್ವರು ಹೆಣ್ಣುಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 17.12.2023ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತ ಕುಟುಂಬ ವರ್ಗ
ಪುತ್ರರು : ಎಸ್.ಎನ್. ಚಂದ್ರಪ್ಪ, ಮಾಜಿ ಉಪಾಧ್ಯಕ್ಷರು, ನಗರಸಭೆ, ದಾವಣಗೆರೆ.
ಎಸ್.ಎನ್. ತಿಪ್ಪೇಸ್ವಾಮಿ (SNT) ತರಕಾರಿ ವರ್ತಕರು
ಎಸ್.ಎನ್. ಗಣೇಶ್,
ಪುತ್ರಿಯರು : ಚಂದ್ರಮ್ಮ, ಪದ್ಮಾವತಿ, ವಿಜಯಲಕ್ಷ್ಮಿ, ತುಳಸಮ್ಮ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಬಂಧು-ಮಿತ್ರರು.


## ಸರಕು ಸಾಗಣೆ : ಸಾಧನೆಯ ಸಾಲಿನಲ್ಲಿ ಕರ್ನಾಟಕ


ನವದೆಹಲಿ, ಡಿ. 16 – ಸರಕು ಸಾಗಣೆಯಲ್ಲಿ ಕರ್ನಾಟಕ ಸೇರಿದಂತೆ 13 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಸಾಧಕರ ಪಟ್ಟಿಯಲ್ಲಿವೆ ಎಂದು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವಾಲಯ ತಿಳಿಸಿದೆ. ಸರಕು ಸಾಗಣೆಯ ಸೂಚ್ಯಂಕವೊಂದನ್ನು ಸಚಿವಾಲಯ ಬಿಡುಗಡೆ ಮಾಡಿದೆ. ಇದರಲ್ಲಿ ಸಾಧನೆ ಮಾಡಿದ ರಾಜ್ಯಗಳನ್ನು ಗುರುತಿಸಲಾಗಿದೆ. ಸರಕು ಸಾಗಣೆಯ ಸುಧಾರಣೆಯು ರಫ್ತು ಹಾಗೂ ಆರ್ಥಿಕ ಬೆಳವಣಿಗೆಗೆ ನೆರವಾಗುತ್ತದೆ.

ಕರ್ನಾಟಕದ ಜೊತೆಗೆ ಸಾಧಕರ ಪಟ್ಟಿಯಲ್ಲಿ ಆಂಧ್ರ ಪ್ರದೇಶ, ತಮಿಳುನಾಡು, ಚಂಡೀಘಡ, ಗುಜರಾತ್, ದೆಹಲಿ, ಅಸ್ಸಾಂ, ಹರಿಯಾಣ, ಪಂಜಾಬ್, ತೆಲಂಗಾಣ ಹಾಗೂ ಉತ್ತರ ಪ್ರದೇಶಗಳಿವೆ.


ಶ್ರೀ ಭಗೀರಥ ರಥಯಾತ್ರೆಗೆ ಸುಸ್ವಾಗತ



ಪರಮಪೂಜ್ಯ ಗುರುಗಳಾದ
ಶ್ರೀ ಡಾ।। ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳ
ಮಾರ್ಗದರ್ಶನದಲ್ಲಿ ಇಂದು (17.12.2023) ಭಾನುವಾರ ಬೆಳಿಗ್ಗೆ 10.00 ಗಂಟೆಗೆ
ದಾವಣಗೆರೆ ನಗರಕ್ಕೆ ಆಗಮಿಸುತ್ತಿರುವ
"ಶ್ರೀ ಭಗೀರಥ ಭಾರತ" ಜನಕಲ್ಯಾಣ ರಥಯಾತ್ರೆಗೆ
ಭಕ್ತಿಪೂರ್ವಕ ಸುಸ್ವಾಗತ ಬಯಸುತ್ತೇವೆ...



ಪರಶುರಾಮಪ್ಪ ಪೂಜಾರ್
ಜಿಲ್ಲಾ ಪತ್ರ ಬರಹಗಾರರು, ಅಧ್ಯಕ್ಷರು
ಪೂಜಾರ್ ಸೌಹಾರ್ದ ಸಹಕಾರಿ ನಿಯಮಿತ.



ಎಸ್.ಹೆಚ್. ಕಿರಣ್‌ಕುಮಾರ್
ಉಪಾಧ್ಯಕ್ಷರು, ಪೂಜಾರ್ ಸೌಹಾರ್ದ ಸಹಕಾರಿ ನಿಯಮಿತ
ಗಡಿಯಾರ ಕಂಬದ ಹತ್ತಿರ, ದಾವಣಗೆರೆ-1



ಪೂಜಾರ್ ಆಂಜನಪ್ಪ
ಗ್ರಾಮ ಆಡಳಿತ ಅಧಿಕಾರಿಗಳು, ಕಂದಾಯ ಇಲಾಖೆ
ದಾವಣಗೆರೆ.

## ಸಂಕ್ಷಿಪ್ತ ಸುದ್ದಿ

**ಆತ್ಮಾಹುತಿ ಪ್ರಹಸನಕ್ಕೆ ಹುನ್ನಾರ ನಡೆಸಿದ್ದ ಸಂಸತ್ ಭದ್ರತೆ ಉಲ್ಲಂಘಿಸಿದವರು**
ನವದೆಹಲಿ : ಸಂಸತ್ತಿನ ಮೇಲೆ ಡಿಸೆಂಬರ್ 13ರಂದು ದಾಳಿ ನಡೆಸಿದ್ದ ಐವರು ಆರೋಪಿಗಳು ಆತ್ಮಾಹುತಿ ಪ್ರಹಸನದ ಯೋಜನೆ ಹೊಂದಿದ್ದರು. ಹೆಚ್ಚು ನಾಟಕೀಯ ಪ್ರಭಾವ ಬೀರುವಂತೆ ಮಾಡಲು ಮೊದಲು ದೇಹದ ಸುರಕ್ಷತೆಗೆ ಜೆಲ್ ಹಚ್ಚಿಕೊಂಡು ನಂತರ ಆತ್ಮಾಹುತಿಯ ಪ್ರಹಸನ ನಡೆಸಲು ಹುನ್ನಾರ ನಡೆಸಿದ್ದರು. ಇದರಿಂದ ಹೆಚ್ಚು ಮಾಧ್ಯಮ ಪ್ರಚಾರ ಗಿಟ್ಟಿಸಬಹುದು ಎಂಬ ಯೋಜನೆ ಅವರದ್ದಾಗಿತ್ತು ಎಂದು ದೆಹಲಿ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

**ಅರುಣಾಚಲ ಮಾಜಿ ಶಾಸಕನ ಹತ್ಯೆ**
ಇಟಾನಗರ : ಅರುಣಾಚಲ ಪ್ರದೇಶದ ಮಾಜಿ ಶಾಸಕ ಯುಮ್ಸನ್ ಮೇಟೆ ಅವರನ್ನು ಶಂಕಿತ ಉಗ್ರರು ತಿರಪ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಗುಂಡಿಟ್ಟು ಹತ್ಯೆಗೈದಿದ್ದಾರೆ. ಅವರು ವೈಯಕ್ತಿಕ ಕೆಲಸಕ್ಕೆ ತೆರಳಿದ ಸಂದರ್ಭದಲ್ಲಿ ಹತ್ಯೆ ಮಾಡಲಾಗಿದೆ. ಗಡಿ ಪ್ರದೇಶದ ಬಳಿ ಅವರ ಹತ್ಯೆ ನಡೆದಿದೆ. ಮೇಟೆ ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಗುಂಡಿನ ದಾಳಿ ನಡೆಸಿದವರು ಮ್ಯಾನ್‌ಮಾರ್ ಕಡೆ ಪರಾರಿಯಾಗಿದ್ದಾರೆ.

**ಅಭಿವೃದ್ಧಿಯಲ್ಲಿ ಸಣ್ಣ ನಗರಗಳ ಪ್ರಮುಖ ಪಾತ್ರ : ಮೋದಿ**
ನವದೆಹಲಿ : ಭಾರತವನ್ನು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶ ಮಾಡುವಲ್ಲಿ ದೇಶದ ನೂರಾರು ಸಣ್ಣ ನಗರಗಳು ಪ್ರಮುಖ ಪಾತ್ರ ವಹಿಸುತ್ತವೆ. ಇಂತಹ ನಗರ ಕೇಂದ್ರಗಳಲ್ಲಿ ಜೀವನ ಸುಲಲಿತಗೊಳಿಸಲು ತಮ್ಮ ಸರ್ಕಾರ ಮೂಲ ಸೌಲಭ್ಯಗಳನ್ನು ವೃದ್ಧಿಸುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**ಸಹಕಾರ ವೃದ್ಧಿಗೆ ಭಾರತ – ಓಮನ್ ಕ್ರಮ**
ನವದೆಹಲಿ : ಹತ್ತು ಪ್ರಮುಖ ವಲಯಗಳಲ್ಲಿ ದ್ವಿಪಕ್ಷೀಯ ಸಂಬಂಧವನ್ನು ವೃದ್ಧಿಸಿಕೊಳ್ಳಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಓಮನ್ ಸುಲ್ತಾನ್ ಹೈತಮ್ ಬಿನ್ ತಾರಿಕ್ ಅವರು ದಾಖಲೆಯೊಂದಕ್ಕೆ ಸಹಿ ಹಾಕಿದ್ದಾರೆ.

**ಸಂಸತ್ ಭದ್ರತೆ ಉಲ್ಲಂಘನೆ : ಆರೋಪಿ 7 ದಿನಗಳ ಕಸ್ಟಡಿಗೆ**
ನವದೆಹಲಿ : ಸಂಸತ್ ಭದ್ರತೆ ಉಲ್ಲಂಘನೆ ಪ್ರಕರಣದ ಆರೋಪಿ ಮಹೇಶ್ ಕಿಮಾವತ್ ಎಂಬಾತನನ್ನು ದೆಹಲಿ ನ್ಯಾಯಾಲಯ ಏಳು ದಿನಗಳ ಪೊಲೀಸ್ ಕಸ್ಟಡಿಗೆ ವಹಿಸಿದೆ. ಆರೋಪಿ ಕಳೆದ ಎರಡು ವರ್ಷಗಳಿಂದ ಸಂಚು ನಡೆಸಿದ್ದ, ಆತನ ಕಸ್ಟಡಿ ವಿಚಾರಣೆಯ ಅಗತ್ಯವಿದೆ ಎಂದು ಪೊಲೀಸರು ಮನವಿ ಮಾಡಿಕೊಂಡ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಲಾಹೋರ್‌ನಲ್ಲಿ ಮಾಲಿನ್ಯ ನಿವಾರಣೆಗೆ ಕೃತಕ ಮಳೆ ಪ್ರಯೋಗ**
ಲಾಹೋರ್ : ಪಾಕಿಸ್ತಾನದ ಲಾಹೋರ್ ನಗರದಲ್ಲಿ ಉಂಟಾಗಿರುವ ಹೊಗೆ ವಾತಾವರಣವನ್ನು ನಿವಾರಿಸಲು ಕೃತಕ ಮಳೆ ಪ್ರಯೋಗ ನಡೆಸಲಾಗಿದೆ. ಯು.ಎ.ಇ. ನೆರವಿನೊಂದಿಗೆ ವಾತಾವರಣ ತಿಳಿಗೊಳಿಸುವ ಯತ್ನ ನಡೆಸಲಾಗಿದೆ. ನಗರದ ಶೇ.10ರಷ್ಟು ಪ್ರದೇಶದಲ್ಲಿ ಮಳೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಹೈಕೋರ್ಟ್ ಸೂಚನೆ ಮೀರಿ ಬಿಜೆಪಿ ನಾಯಕರಿಂದ ಸಂತ್ರಸ್ತೆ ಭೇಟಿ : ಸಿದ್ದರಾಮಯ್ಯ**
ಬೆಂಗಳೂರು : ಬೆಳಗಾವಿಯ ಸಂತ್ರಸ್ತ ಮಹಿಳೆ ಚಿಕಿತ್ಸೆ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಸಂದರ್ಶಕರ ಭೇಟಿ ಮೇಲೆ ಹೈಕೋರ್ಟ್ ನಿರ್ಬಂಧ ಹೇರಿದೆ. ಆದರೂ, ಅಮಾನುಷ ಘಟನೆಯನ್ನು ರಾಜಕೀಯ ಲಾಭಕ್ಕೆ ಬಳಸುವ ದುರ್ಬುದ್ಧಿ ತೋರಿರುವ ಬಿಜೆಪಿ ನಾಯಕರು ಸತ್ಯಶೋಧನೆಯ ಹೆಸರಿನಲ್ಲಿ ನ್ಯಾಯಾಲಯದ ಆದೇಶ, ನಿರ್ದೇಶನಗಳನ್ನು ಗಾಳಿಗೆ ತೂರಿ ಸಂತ್ರಸ್ತೆಯನ್ನು ಭೇಟಿಯಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

## ಐಎಎನ್‌ಎಸ್ ಸುದ್ದಿ ಸಂಸ್ಥೆ ಅದಾನಿ ತೆಕ್ಕೆಗೆ

**(1ನೇ ಪುಟದಿಂದ)** ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಅದಾನಿ ಸಮೂಹ ಮಾಧ್ಯಮ ವಲಯಕ್ಕೆ ಕಾಲಿರಿಸಿತ್ತು. ಹಣಕಾಸು ಸುದ್ದಿ ವೇದಿಕೆಯಾದ ಬಿ.ಕ್ಯೂ. ಪ್ರೈಮ್ ಅನ್ನು ಮೊದಲು ಖರೀದಿಸಲಾಗಿತ್ತು. ನಂತರ ಎನ್.ಡಿ.ಟಿ.ವಿ. ಖರೀದಿಸಲಾಗಿತ್ತು.

# ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರ ಸಾಲದ ಮೇಲಿನ ಬಡ್ಡಿ, ಚಕ್ರ ಬಡ್ಡಿ ಮನ್ನಾ

**ಹೊನ್ನಾಳಿ ತಾಲ್ಲೂಕಿನ ಸಾಸ್ವೇಹಳ್ಳಿ ಗ್ರಾಮದಲ್ಲಿನ ಜನತಾ ದರ್ಶನ ಕಾರ್ಯಕ್ರಮದಲ್ಲಿ ಶಾಸಕ ಡಿ.ಜಿ. ಶಾಂತನಗೌಡ**

ಹೊನ್ನಾಳಿ, ಡಿ.16- ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಜನತಾ ದರ್ಶನ ಕಾರ್ಯಕ್ರಮವು ಜನರ ಸಮಸ್ಯೆಗಳನ್ನು ಸ್ಥಳೀಯವಾಗಿ ಇತ್ಯರ್ಥಗೊಳಿಸುವುದರಲ್ಲಿ ಯಶಸ್ವಿಯಾಗಿದೆ ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.



ಸಾಸ್ವೇಹಳ್ಳಿ ಗ್ರಾಮದಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳ ಸಹಯೋಗದೊಂದಿಗೆ ಶನಿವಾರ ಹಮ್ಮಿಕೊಂಡಿದ್ದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರ ಸಾಲದ ಮೇಲಿನ ಬಡ್ಡಿ, ಚಕ್ರ ಬಡ್ಡಿ ಮನ್ನಾ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಘೋಷಿಸಿ, ಈ ಮೂಲಕ ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಿದ್ದಾರೆ. ರೈತರು ತಾವು ಪಡೆದಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಅಸಲನ್ನು ಕಟ್ಟಿದರೆ ಉಳಿದಿದ್ದನ್ನು ಸರ್ಕಾರವೇ ಭರಿಸಲಿದೆ. ಈ ಬಗ್ಗೆ ಶೀಘ್ರವೇ ಆದೇಶ ಹೊರಡಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಕೇಂದ್ರ ಸರ್ಕಾರವು ರಾಜ್ಯಕ್ಕೆ ಕೊಡಬೇಕಾದ 18000 ಕೋಟಿ ರೂ. ಅನುದಾನ ನೀಡದೇ ಇಂತಹ ಬರಗಾಲದಲ್ಲೂ ಮೀನಾಮೇಷ ಎಣಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಂದಾಯ ಇಲಾಖೆಯ ಕಂದಾಯ ಗ್ರಾಮಗಳ ಸಮಸ್ಯೆ, ಇನಾಮ್ ಜಮೀನುಗಳ ಸಮಸ್ಯೆ ಇ-ಸ್ವತ್ತು, ಪೋಡಿ ಸೇರಿದಂತೆ ಇತರ ಸಮಸ್ಯೆಗಳು ಹೆಚ್ಚಾಗಿದ್ದು, ಈ ಎಲ್ಲಾ ಸಮಸ್ಯೆಗಳನ್ನು ಮುಂಬರುವ ಮಾರ್ಚ್ 31 ರೊಳಗಾಗಿ ಇತ್ಯರ್ಥ ಮಾಡಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ ಅಧಿಕಾರಿಗಳು ತ್ವರಿತಗತಿ ಯಲ್ಲಿ ಕೆಲಸ ಮಾಡಬೇಕು ಎಂದು ಹೇಳಿದರು.

ಚುನಾವಣೆಗೂ ಮುನ್ನ ಕಾಂಗ್ರೆಸ್ ಕೊಟ್ಟಂತಹ 5 ಭರವಸೆಗಳಲ್ಲಿ ಈಗಾಗಲೇ 4 ಭರವಸೆಗಳನ್ನು ಈಡೇರಿಸಿದೆ. ಶಕ್ತಿ ಯೋಜನೆಯ ಉಚಿತ ಬಸ್ ಪ್ರಯಾಣದಲ್ಲಿ 110 ಕೋಟಿ ಮಹಿಳೆಯರು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಿ ಕೊಟ್ಟಂತ ಸೌಲಭ್ಯವನ್ನು ಸದುಪಯೋಗ ಮಾಡಿಕೊಂಡಿದ್ದಾರೆ. ಉಚಿತ ವಿದ್ಯುತ್ ನೀಡುವ ಯೋಜನೆ ಯಾವುದೇ ಸಮಸ್ಯೆ ಇಲ್ಲದೆ ನಡೆಯುತ್ತಿದೆ. ಗೃಹಲಕ್ಷ್ಮಿ ಯೋಜನೆಯಲ್ಲಿ 1.17 ಕೋಟಿ ಮನೆ ಯಜಮಾನಿಯರ ಹೆಸರು ನೋಂದಾಯಿಸಿದ್ದು, ಇದರಲ್ಲಿ 1.14 ಕೋಟಿ ಮಹಿಳಯರಿಗೆ 2 ಸಾವಿರ ಹಣ ಪ್ರತಿ ತಿಂಗಳು ಅವರ ಖಾತೆಗೆ ಜಮಾ ಆಗುತ್ತಿದ್ದು, ಮಿಕ್ಕ 4 ಲಕ್ಷ ಮಹಿಳೆಯರಿಗೆ ತಂತ್ರಾಂಶ ಹಾಗೂ ಇತರ ಕಾರಣಗಳಿಂದ ಹಣ ಜಮಾ ಆಗುವುದು ತಡವಾಗಿದೆ. ಹಣ ಜಮೆಯಾಗದವರು ನನ್ನ ಗಮನಕ್ಕೆ ತಂದರೆ ನಮ್ಮ ತಂಡದವರನ್ನು ಮನೆ ಬಾಗಿಲಿಗೆ ಕಳುಹಿಸಿ, ಸಮಸ್ಯೆ ಬಗೆಹರಿಸಿ ಕೊಡಲಾಗುವುದು ಎಂದು ಮನವಿ ಮಾಡಿದರು.

ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ಮಾತನಾಡಿ, ಪೋಡಿ, ಇ-ಸ್ವತ್ತು ಸೇರಿದಂತೆ ಇತರ ಕೆಲಸಗಳಿಗೆ ಜನರು ಅಲೆಯಬಾರದೆಂದು ಸ್ಥಳದಲ್ಲಿಯೇ ಅರ್ಜಿಗಳನ್ನು ಸ್ವೀಕರಿಸಿ ಇತ್ಯರ್ಥ ಮಾಡಿ ಕೊಡಲಾಗುವುದು. ಇಂದಿನ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 175 ಅರ್ಜಿಗಳು ಸ್ವೀಕಾರವಾಗಿದ್ದು, ಹೆಚ್ಚಿನ ಅರ್ಜಿಗಳು ತಮ್ಮ ಜಮೀನುಗಳಿಗೆ ತೆರಳಲು ರಸ್ತೆ ಅವಶ್ಯಕತೆ, ಸ್ಥಳಾಂತರ ಗ್ರಾಮಗಳ ಇ-ಸ್ವತ್ತು ಪಡೆಯುವುದು, ಸ್ಮಶಾನದ ಸಮ್ಯಸೆಗಳ ಅರ್ಜಿಗಳು ಇವೆ ಎಂದರು.

ಕೆಲವು ಗ್ರಾಮಗಳಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸ್ಮಶಾನದ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದು ಯಾವುದೇ ಮುಲಾಜಿಲ್ಲದೇ ಒತ್ತುವರಿ ತೆರವುಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಜಿ.ಪಂ ಸಿಇಒ ಸುರೇಶ್ ಹಿಟ್ನಾಳ್ ಮಾತನಾಡಿ, ನರೇಗಾ ಯೋಜನೆಯಡಿ 5.60 ಲಕ್ಷ ಮಾನವ ದಿನಗಳಲ್ಲಿ 5.20 ಲಕ್ಷ ಮಾನವ ದಿನಗಳಲ್ಲಿ ಶೇ.94 ಗುರಿ ಸಾಧನೆ ಮಾಡಲಾಗಿದೆ. ಹೊಸಹಳ್ಳಿ, ಹೊಸದೇವರ ಹೊನ್ನಾಳಿ ಮತ್ತು ಫಲವನಹಳ್ಳಿ ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಸರ್ಕಾರದಿಂದ ಅನುಮತಿ ಸಿಕ್ಕಿದೆ ಎಂದು ಮಾಹಿತಿ ನೀಡಿದರು.

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್ ಪಟ್ಟರಾಜೇಗೌಡ, ತಾ.ಪಂ ಇಒ ಹೆಚ್. ವಿ.ರಾಘವೇಂದ್ರ, ತಾಲ್ಲೂಕು ವೈದ್ಯಾಧಿಕಾರಿ ಡಾ.ಕೆಂಚಪ್ಪ, ಕೆ.ಎಸ್.ಆರ್.ಟಿ.ಸಿ ಡಿಪೋ ವ್ಯವಸ್ಥಾಪಕ ಮಹೇಶ್ವರಪ್ಪ, ಪಿಡಿಒ ಹನುಮಂತನಾಯ್ಕ್, ಉಪತಹಶೀಲ್ದಾರ್ ಚಂದ್ರು, ಸಾಸ್ವೆಹಳ್ಳಿ ಗ್ರಾ.ಪಂ ಅಧ್ಯಕ್ಷ ಜಬ್ಬಾರ್ ಅಲಿಖಾನ್, ಉಪಾಧ್ಯಕ್ಷೆ ಶಾಂತಕೃಷ್ಣಮೂರ್ತಿ ಮತ್ತು ಇತರರು ಉಪಸ್ಥಿತರಿದ್ದರು.

# ಗ್ರಾಮೀಣ, ಗುಡ್ಡಗಾಡು ಜನರ ಮನೆ ಬಾಗಿಲಿಗೆ ಆರೋಗ್ಯ ಸೇವೆ

**ಖಾಸಗಿ ಸಹಭಾಗಿತ್ವದ ಸಂಚಾರಿ ಸಮುದಾಯ ಆರೋಗ್ಯ ಘಟಕಕ್ಕೆ ಸರ್ಕಾರದಿಂದ ಚಾಲನೆ**

ಬೆಂಗಳೂರು, ಡಿ. 16 - ಗ್ರಾಮೀಣ, ಗುಡ್ಡಗಾಡು ಹಾಗೂ ಕೊಳಚೆ ಪ್ರದೇಶಗಳಲ್ಲಿನ ಜನರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಒದಗಿಸುವ ಸೌಲಭ್ಯಕ್ಕೆ ಸರ್ಕಾರ ಇಂದಿಲ್ಲಿ ಚಾಲನೆ ನೀಡಿದೆ.

ಖಾಸಗಿ ಸಹಭಾಗಿತ್ವದಲ್ಲಿ ಸುಧಾರಿತ ಸಂಚಾರಿ ಸಮುದಾಯ ಆರೋಗ್ಯ ಘಟಕಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂ ರಾವ್ ಇಂದಿಲ್ಲಿ ಚಾಲನೆ ನೀಡಿದರು.

ಸಂಚಾರಿ ಸಮುದಾಯ ಘಟಕವು ರಾಜ್ಯಾದ್ಯಂತ ನಿಗದಿತ ದಿನಾಂಕಗಳಂದು ಸಂಚರಿಸಲಿದೆ. ಈ ಘಟಕವು ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆ ಹೊಂದಿದ್ದು, ಆರೋಗ್ಯ ತಪಾಸಣೆ, ಇಂಟರ್‌ನೆಟ್ ಸೌಲಭ್ಯ, ವಿವಿಧ ಪರೀಕ್ಷಾ ಪ್ರಯೋಗಾಲಯ, ಒಂದು ಕೆಮಿಕಲ್ ಶೌಚಾಲಯ ಸೌಲಭ್ಯವನ್ನು ಹೊಂದಿರುತ್ತದೆ.

ಗ್ರಾಮೀಣ, ಗುಡ್ಡಗಾಡು ಪ್ರದೇಶಗಳಿಗೆ ತೆರಳಿ ಜನರಿಗೆ ಉಚಿತ ಆರೋಗ್ಯ ತಪಾಸಣೆ ಮಾಡುವುದಲ್ಲದೆ, ಎಕ್ಸ್‌ರೇ ಸೇರಿದಂತೆ ವಿವಿಧ ವೈದ್ಯಕೀಯ ಪರೀಕ್ಷೆಗಳನ್ನೂ ನಡೆಸಿ ಔಷಧ ನೀಡಲಿದೆ.

ಹೃದಯ ಸಂಬಂಧಿತ ಕಾಯಿಲೆಗಳನ್ನು ಪತ್ತೆ ಹಚ್ಚಲು ಸುಧಾರಿತ ಸ್ಕ್ರೀನಿಂಗ್ ಸೌಲಭ್ಯ ಹೊಂದಿರುತ್ತದೆ.

ಹೆಚ್ಚಿನ ವೈದ್ಯಕೀಯ ಸಮಾಲೋಚನೆಯನ್ನು ನಾರಾಯಣ ಹೆಲ್ತ್‌ನ ತಜ್ಞರೊಂದಿಗೆ ಟೆಲಿ ಸಮಾಲೋಚನೆ ಮೂಲಕ ಸ್ಥಳದಲ್ಲೇ ಚಿಕಿತ್ಸಾ ಸಲಹೆಗಳನ್ನು ನೀಡಲಿದೆ.

ಆರೋಗ್ಯ ಇಲಾಖೆ, ಪ್ರಸ್ತುತ ಖಾಸಗಿ ಸಹಭಾಗಿತ್ವ ದಲ್ಲಿ ಇಂತಹ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಾಲನೆ ನೀಡಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ವಾಹನಗಳು ಸೇರ್ಪಡೆಗೊಳ್ಳಲಿವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

# ಅಸ್ವಸ್ಥರ ಆಸ್ಪತ್ರೆಗೆ ದಾಖಲಿಸಲು ಬಲವಂತವಾಗಿ ಕಾರು ಬಳಕೆ :

## ಡಕಾಯತಿ ಪ್ರಕರಣ ಮರುಪರಿಶೀಲಿಸಲು ಮಧ್ಯಪ್ರದೇಶ ಸಿಎಂ ಸೂಚನೆ

ಭೂಪಾಲ್, ಡಿ. 16 – ಅಸ್ವಸ್ಥರಾಗಿದ್ದ ರೈಲ್ವೆ ಪ್ರಯಾಣಿಕನನ್ನು ಆಸ್ಪತ್ರೆಗೆ ದಾಖಲಿಸಲು ಹೈಕೋರ್ಟ್ ನ್ಯಾಯಮೂರ್ತಿ ಕಾರನ್ನು ಬಲವಂತವಾಗಿ ಬಳಸಿದ್ದ ವಿದ್ಯಾರ್ಥಿಗಳ ವಿರುದ್ಧ ಡಕಾಯಿತಿ ಪ್ರಕರಣ ದಾಖಲಿಸುವ ಔಚಿತ್ಯದ ಬಗ್ಗೆ ಪರಿಶೀಲಿಸುವಂತೆ ಮಧ್ಯ ಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಪೊಲೀಸ್ ಮಹಾನಿರ್ದೇಶಕರಿಗೆ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಯಾವುದೇ ಅಪರಾಧಿಕ ಹಿನ್ನೆಲೆ ಹೊಂದಿಲ್ಲ. ಅವರ ವಿರುದ್ಧ ಡಕಾಯಿತಿ ಪ್ರಕರಣ ದಾಖಲಿಸುವುದು ಸೂಕ್ತವೇ ಎಂಬ ಬಗ್ಗೆ ಪರಿಶೀಲಿಸುವಂತೆ ಮುಖ್ಯಮಂತ್ರಿ ಯಾದವ್ ಹೇಳಿದ್ದಾರೆ.

ಎ.ಬಿ.ವಿ.ಪಿ.ಯ ಗ್ವಾಲಿಯರ್ ಕಾರ್ಯದರ್ಶಿ ಹಿಮಾಂಶು ಶ್ರೋತ್ರಿ ಹಾಗೂ ಉಪ ಕಾರ್ಯದರ್ಶಿ ಸುಕ್ರಿತ್ ಶರ್ಮ ಅವರ ವಿರುದ್ಧ ಡಕಾಯತಿ ಪ್ರಕರಣ ದಾಖಲಿಸಲಾಗಿತ್ತು.

ಎ.ಬಿ.ವಿ.ಪಿ.ಯ ಕೆಲವರು ದೆಹಲಿಯಿಂದ ಗ್ವಾಲಿಯರ್‌ಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಆಗ ವ್ಯಕ್ತಿಯೊಬ್ಬರ ಆರೋಗ್ಯ ತೀವ್ರವಾಗಿ ಹದಗೆಟ್ಟಿತ್ತು. ಅವರು ಈ ಬಗ್ಗೆ ಗ್ವಾಲಿಯರ್ ನಿಲ್ದಾಣದಲ್ಲಿರುವ ಇತರೆ ಎ.ಬಿ.ವಿ.ಪಿ. ಕಾರ್ಯಕರ್ತರಿಗೆ ಮಾಹಿತಿ ನೀಡಿದ್ದರು. ಗ್ವಾಲಿಯರ್ ನಿಲ್ದಾಣದಲ್ಲಿ ಅಸ್ವಸ್ಥ ವ್ಯಕ್ತಿಯನ್ನು ರೈಲಿನಿಂದ ಕೆಳಗಿಳಿಸಲಾಗಿತ್ತು. ಆದರೆ, 25 ನಿಮಿಷಗಳಾದರೂ ಆಂಬುಲೆನ್ಸ್ ಬರಲಿಲ್ಲ ಎಂದು ಎ.ಬಿ.ವಿ.ಪಿ. ಮಧ್ಯಪ್ರದೇಶ ಘಟಕದ ಕಾರ್ಯದರ್ಶಿ ಸಂದೀಪ್ ವೈಷ್ಣವ್ ಹೇಳಿದ್ದಾರೆ.

ಆಗ ಕಾರ್ಯಕರ್ತರು ನಿಲ್ದಾಣದ ಹೊರಗೆ ನಿಲ್ಲಿಸಲಾಗಿದ್ದ ಕಾರಿನಲ್ಲಿ ಅಸ್ವಸ್ಥ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದೊಯ್ದರು. ಆದರೆ, ಅವರು ಬದುಕುಳಿಯಲಿಲ್ಲ ಎಂದು ವೈಷ್ಣವ್ ತಿಳಿಸಿದ್ದಾರೆ.

ಮೃತ ವ್ಯಕ್ತಿಯನ್ನು ಉತ್ತರ ಪ್ರದೇಶದ ಝಾನ್ಸಿಯ ಖಾಸಗಿ ವಿಶ್ವವಿದ್ಯಾಲಯದ ಉಪಕುಲಪತಿ ರಣಜೀತ್ ಸಿಂಗ್ (68) ಎಂದು ಗುರುತಿಸಲಾಗಿದೆ.

ಅಸ್ವಸ್ಥ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದೊಯ್ಯಲು ವಿದ್ಯಾರ್ಥಿಗಳು ಹೈಕೋರ್ಟ್ ನ್ಯಾಯಮೂರ್ತಿಗಳ ಕಾರು ಬಳಸಿದ್ದರು. ಈ ಬಗ್ಗೆ ಡಕಾಯಿತಿ ಪ್ರಕರಣ ದಾಖಲಿಸಲಾಗಿದೆ. ನ್ಯಾಯಾಲಯ ಬುಧವಾರ ಎ.ಬಿ.ವಿ.ಪಿ. ಕಾರ್ಯಕರ್ತರಿಗೆ ಜಾಮೀನು ನಿರಾಕರಿಸಿತ್ತು.

ನೆರವನ್ನು ವಿನಯವಾಗಿ ಕೇಳಬೇಕೇ ಹೊರತು ಬಲವಂತಪಡಿಸಬಾರದು. ಪೊಲೀಸ್ ಡೈರಿ ಪ್ರಕಾರ ಆಂಬ್ಯುಲೆನ್ಸ್ ಸ್ಥಳಕ್ಕೆ ಬಂದಿತ್ತು ಎಂದು ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂಜಯ್ ಗೋಯಲ್ ಹೇಳಿ, ಜಾಮೀನು ನಿರಾಕರಿಸಿದ್ದರು.

# ಲಿಂಗಾಯತ ಧರ್ಮದ ಎಲ್ಲಾ ಒಳಪಂಗಡಗಳು ಒಂದಾಗುವ ಕಾಲ ಸನ್ನಿಹಿತ : ಹರಿಹರದಲ್ಲಿನ ಸಭೆಯಲ್ಲಿ ಶಾಸಕ ಬಿ.ಪಿ. ಹರೀಶ್

ಹರಿಹರ, ಡಿ.16- ಪ್ರತಿಷ್ಠೆಗೋಸ್ಕರ ಜಾತಿ ಗಣತಿಯಲ್ಲಿ ಲಿಂಗಾಯತ ಧರ್ಮದವರಿಗೆ ಅನ್ಯಾಯವಾಗಿದ್ದು, ಅದನ್ನು ಪ್ರತಿಯೊಬ್ಬ ಲಿಂಗಾಯತರು ಖಂಡಿಸಬೇಕು ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.



ನಗರದ ರೇಣುಕ ಮಂದಿರದ ಸಭಾಂಗಣದಲ್ಲಿ ದಾವಣಗೆರೆಯಲ್ಲಿ ನಡೆಯುವ ಅಖಿಲ ಭಾರತ ವೀರಶೈವ ಲಿಂಗಾಯತ 24ನೇ ಮಹಾಅಧಿವೇಶನದ ಅಂಗವಾಗಿ ಇಂದು ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ದಾವಣಗೆರೆಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಅಧಿವೇಶನ ನಡೆಯುವುದು ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಲಿದ್ದು, ಜೊತೆಗೆ ಲಿಂಗಾಯತ ಧರ್ಮದ ಎಲ್ಲಾ ಒಳ ಪಂಗಡಗಳು ಒಂದಾಗುವ ಕಾಲವಾಗಿ ಮಾರ್ಪಡು ವಂತದ್ದಾಗಿದೆ. ಜಾತಿ ಸಮೀಕ್ಷೆ ವಿಚಾರದಲ್ಲಿ ಎಲ್ಲರೂ ಒಗ್ಗೂಡಿಕೊಂಡು ಹೋಗಬೇಕು.

ಈ ರೀತಿಯ ಹೋರಾಟಕ್ಕೆ ಅರ್ಥ ಬರಬೇಕಾದರೆ ಇಂತಹ ಮಹಾ ಅಧಿವೇಶನದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಮಾಜದವರು ಸೇರುವಂತಾಗಬೇಕು ಹಾಗೂ ದೊಡ್ಡ ಪ್ರಮಾಣದಲ್ಲಿ ಶಕ್ತಿ ಪ್ರದರ್ಶನ ಆಗುವಂತಾಗಬೇಕು. ತಾನು ಕೂಡ ತಾಲ್ಲೂಕಿನಲ್ಲಿ ಜನರು ಹೆಚ್ಚಿನ ಪ್ರಮಾಣದಲ್ಲಿ ಸೇರುವುದಕ್ಕೆ ಸಹಕರಿಸುವುದಾಗಿ ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ ಮಾತನಾಡಿ, ಲಿಂಗಾಯತ ಧರ್ಮದಲ್ಲಿ ಬಡವರೂ ಇದ್ದಾರೆ, ಜೊತೆಗೆ ಸಾಕಷ್ಟು ನ್ಯೂನತೆಗಳು ಇದ್ದರೂ, ಪ್ರಗತಿಯನ್ನು ಕಂಡುಕೊಳ್ಳುವಲ್ಲಿ ಸಫಲತೆಯನ್ನು ಕಂಡಿದ್ದಾರೆ. ಆದರೆ ಸಮಾಜದಲ್ಲಿ ಒಗ್ಗಟ್ಟಿನಿಂದ ಇರುವುದು ಅಷ್ಟೇ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಹಾಗಾಗಿ ತೋರ್ಪಡಿಸುವ ಸಲುವಾಗಿ ಅಥವಾ ರಾಜಕೀಯ ಉದ್ದೇಶಕ್ಕಾಗಿ ನಾನು ಲಿಂಗಾಯತ ಧರ್ಮ ಎನ್ನದೇ ಒಗ್ಗಟ್ಟಿನಿಂದ ಈ ಮಹಾ ಅಧಿವೇಶನದಲ್ಲಿ ಪಾಲ್ಗೊಂಡು ಯಶಸ್ವಿಯಾಗಿಸುವಂತೆ ಹೇಳಿದರು.

ನಾಡಿನಲ್ಲಿ ಪ್ರಮುಖವಾದ ಸಮಾಜ ಅಂದರೆ ವೀರಶೈವ ಸಮಾಜವಾಗಿದ್ದು, ಸಮಾಜದವರಿಗೆ ಅನ್ಯಾಯವಾದ ಸಂದರ್ಭದಲ್ಲಿ ಶಾಮನೂರು ಶಿವಶಂಕರಪ್ಪನವರು ಧ್ವನಿ ಎತ್ತಿದ್ದು, ಅದು ಅವರು ಸ್ವಾರ್ಥದ ದೃಷ್ಟಿಯಿಂದ ಧ್ವನಿ ಎತ್ತದೇ ಸಮಾಜದವರಿಗೆ ಅನ್ಯಾಯವಾಗುತ್ತದೆ ಎಂದು. ಹಾಗಾಗಿ ಅಂತಹ ಗುಣವುಳ್ಳಂತವರು ಸಮಾಜಕ್ಕೆ ಅವಶ್ಯಕತೆ ಇದೆ ಎಂದು ಹೇಳಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಶಾಮನೂರು ಶಿವಶಂಕರಪ್ಪನವರು ರಾಷ್ಟ್ರೀಯ ಅಧ್ಯಕ್ಷರಾದ ಮೇಲೆ ಸಮಾಜದಲ್ಲಿ ಹೆಚ್ಚು ಜಾಗೃತಿ ಮೂಡಿದೆ. ಸಮಾಜಕ್ಕೆ ಹೆಚ್ಚು ಗೌರವ ಬಂದಿದೆ. ಸಮಾಜದವರಲ್ಲಿ ಏನೇ ಭಿನ್ನಾಭಿಪ್ರಾಯ ಇದ್ದರೂ ಅದನ್ನು ಮರೆತು ಮಹಾ ಅಧಿವೇಶನದಲ್ಲಿ ಕನಿಷ್ಟ 30 ಸಾವಿರಕ್ಕೂ ಹೆಚ್ಚು ಜನರನ್ನು ಸೇರಿಸುವಂತೆ ಸಮಾಜದ ಮುಖಂಡರು ಮಾಡಬೇಕು ಎಂದು ಹೇಳಿದರು.

ನಗರಸಭೆ ಸದಸ್ಯೆ ಅಶ್ವಿನಿ ಕೃಷ್ಣ ಮಾತನಾಡಿ, ಮಹಾ ಅಧಿವೇಶನದಲ್ಲಿ ಮಹಿಳೆಯರೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುವ ಮೂಲಕ ಮಹಾ ಅಧಿವೇಶನವನ್ನು ಯಶಸ್ವಿಯಾಗಿಸುವಂತೆ ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ಅಧ್ಯಕ್ಷ ಡಿ.ಜೆ. ಶಿವಾನಂದಪ್ಪ, ಜಿ.ಬಿ. ಹಾಲೇಶ್ ಗೌಡ್ರು, ಟಿ.ಜೆ. ಮುರುಗೇಶಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಹಲಸಬಾಳು ಶಿವಾನಂದಪ್ಪ, ಡಿ.ಎಂ. ಹಾಲಸ್ವಾಮಿ, ವೀರೇಶ್ ಯಾದವಾಡ, ಹೊನ್ನಾಳಿ ಬಾಬಣ್ಣ, ತಿಮ್ಮನಗೌಡ, ಕರಿಬಸಪ್ಪ ಕುಂಬಾರ, ಜಿ.ಕೆ. ಮಲ್ಲಿಕಾರ್ಜುನ, ಕರಿಬಸಪ್ಪ ಕಂಚಿಕೇರಿ, ಆರ್.ಸಿ. ಪಾಟೀಲ್ ಬೇವಿನಹಳ್ಳಿ, ಗುತ್ತೂರು ಕರಿಬಸಪ್ಪ, ಬಸವರಾಜ್ ಬೆಲ್ಲದ್ ಪಂಚಾಕ್ಷರಿ, ಎನ್.ಇ. ಸುರೇಶ್, ಅಂಜು ಸುರೇಶ್ ರಾಜೇನವರ್, ಜಿ.ವಿ. ಪ್ರವೀಣ್, ಕೆ.ಸಿ. ಶಾಂತಕುಮಾರಿ, ಚಂದ್ರಲೇಖ, ಮಂಜುಳಾ ನಾರಪ್ಪ, ರೂಪ ವಿರುಪಾಕ್ಷಪ್ಪ, ಪುಷ್ಪಾ, ಮಮತಾ ಬೆಲ್ಲದ್, ಚೇತನ, ಮಮತಾ ಟಿ., ಯಶೋಧ ಚಿದಾನಂದ, ದೀಟೂರು ವಾಮದೇವ, ಅಂದನೂರು ಕೊಟ್ರೇಶ್, ಸೋಮಶೇಖರ್ ಹಾಸಬಾವಿ, ಹನಗವಾಡಿ ಮಂಜುನಾಥ್ ಮತ್ತು ಇತರರು ಹಾಜರಿದ್ದರು.

# ಹರಪನಹಳ್ಳಿ ವಕೀಲರ ಸಂಘದ ಅಧ್ಯಕ್ಷರಾಗಿ ರಾಮನಗೌಡ ಪಾಟಿಲ್



ಹರಪನಹಳ್ಳಿ, ಡಿ.16- ತಾಲ್ಲೂಕು ವಕೀಲರ ಸಂಘದ ಪದಾಧಿಕಾರಿಗಳ ಸ್ಥಾನಗಳಿಗೆ ಇಂದು ನಡೆದ ಚುನಾವಣೆಯಲ್ಲಿ ವಕೀಲರ ಸಂಘದ ಅಧ್ಯಕ್ಷರಾಗಿ ರಾಮನಗೌಡ ಪಾಟೀಲ್ 102 ಮತಗಳನ್ನು ಪಡೆದು ವಕೀಲರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ನ್ಯಾಯಾಲಯದ ವಕೀಲರ ಸಂಭಾಗಣದಲ್ಲಿ ಶನಿವಾರ ವಕೀಲರ ಸಂಘದ ವಿವಿಧ ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ರಾಮನಗೌಡ ಪಾಟೀಲ್ ಮತ್ತು ವಿ.ಜಿ.ಪ್ರಕಾಶ್ ಗೌಡ, ಉಪಾಧ್ಯಕ್ಷರಾಗಿ ಸಿ.ಪೀರ್ ಅಹಮ್ಮದ್ ಮತ್ತು ಬಾಗಳಿ ಮಂಜುನಾಥ್, ಕಾರ್ಯದರ್ಶಿಯಾಗಿ ಜಿ.ಎಸ್.ಎಂ. ಕೊಟ್ರಯ್ಯ ಮತ್ತು ಕೆ. ಪ್ರಕಾಶ್, ಜಂಟಿ ಕಾರ್ಯದರ್ಶಿಯಾಗಿ ಹೆಚ್.ಎಂ.ಕೇಶವಮೂರ್ತಿ, ಸಿ. ರಾಜಪ್ಪ ಮತ್ತು ಎ.ಬಿ. ಗೀರೀಶ್ ಗೌಡ, ನಾಮ ಪತ್ರ ಸಲ್ಲಿಸಿದ್ದರು.

ನಂತರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ರಾಮನಗೌಡ ಪಾಟೇಲ್, ಉಪಾಧ್ಯಕ್ಷರಾಗಿ ಸಿ.ಪೀರ್ ಆಹಮ್ಮದ್, ಕಾರ್ಯದರ್ಶಿ ಜಿ.ಎಸ್.ಎಂ. ಕೊಟ್ರಯ್ಯ, ಜಂಟಿ ಕಾರ್ಯದರ್ಶಿಯಾಗಿ ಕೇಶವಮೂರ್ತಿ ಆಯ್ಕೆಯಾಗಿದ್ದಾರೆ.

ಖಜಾಂಚಿಯಾಗಿ ಹೂಲೇಪ್ಪ ಆವಿರೋಧವಾಗಿ ಆಯ್ಕೆ ಆಗಿದ್ದಾರೆ. ಕಾರ್ಯಕಾರಣಿ ಮಂಡಳಿ ಸ್ಥಾನಕ್ಕೆ ಬಿ.ತಿಪ್ಪೇಶ್, ಕೆರೆಗೂಡಿಹಳ್ಳಿ ಹಾಲೇಶ್ ಸಿ. ಕಂಡ್ಯಪ್ಪ, ಕೆ. ಎಸ್.ಪ್ರಭಾಕರ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಕೀಲರ ಸಂಘದ ಪದಾಧಿಕಾರಿಗಳ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 232 ಮತದಾರರ ಪೈಕಿ 195 ಸದಸ್ಯರು ಮತ ಚಲಾಯಿಸಿದರು. ಚುನಾವಣಾಧಿಕಾರಿಗಳಾಗಿ ಬಿ.ಮಾಬೂಬ್‌ಸಾಬ್, ಡಿ.ಬಿ.ವಾಸುದೇವ ಕಾರ್ಯನಿರ್ವಹಿಸಿದರು.

## ರಿತ್ತಿ ಅನಂತ ನಿಧನ



ದಾವಣಗೆರೆ ಕಾಳಿಕಾದೇವಿ ರಸ್ತೆ ವಾಸಿ **ದಿ.ಮುದ್ದಿ ವಿರೂಪಾಕ್ಷಪ್ಪನವರ** ಅಳಿಯ **ರಿತ್ತಿ ಅನಂತ** (69) ಇವರು ದಿನಾಂಕ 16.12.2023ರ ಶನಿವಾರ ಸಂಜೆ 6.30ಕ್ಕೆ ನಿಧನಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.12.2023ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ರುದ್ರಭೂಮಿಯಲ್ಲಿ ನೆರವೇರಲಿದೆ.

**- ದುಃಖತಪ್ತರು, ರಿತ್ತಿ ಲೀಲಾವತಿ (ಪತ್ನಿ), ಕಾಳಿಕಾದೇವಿ ರಸ್ತೆ, ದಾವಣಗೆರೆ. ಮೊ: 7892295142**

## ಮಿಟ್ಲಕಟ್ಟೆ ನಾಗಮ್ಮ ನಿಧನ




**ಹರಿಹರ ತಾಲ್ಲೂಕು ಮಿಟ್ಲಕಟ್ಟೆ ಗ್ರಾಮದ ವಾಸಿ, ಸಂಗವಳ್ಳಿ ದಿ|| ಬಸಪ್ಪನವರ ಧರ್ಮಪತ್ನಿ ಶ್ರೀಮತಿ ನಾಗಮ್ಮ ಇವರು ದಿನಾಂಕ 16.12.2023ರ ಶನಿವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 81 ವರ್ಷ ವಯಸ್ಸಾಗಿತ್ತು.**

**ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17-12-2023ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಹರಿಹರ ತಾಲ್ಲೂಕು ಮಿಟ್ಲಕಟ್ಟೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.**

**ದುಃಖತಪ್ತ ಕುಟುಂಬ ವರ್ಗ, ಮೊ. : 94491 62269**

## ಶೀಲಾ ಕುಮಾರ್ ನಿಧನ



ದಾವಣಗೆರೆ ಸಿಟಿ ವಾಸಿ ಜೆಡಿಎಸ್ ಮಹಿಳಾ ಅಧ್ಯಕ್ಷರಾಗಿದ್ದ ಶ್ರೀಮತಿ ಶೀಲಾ ಕುಮಾರ್ (54) ಇವರು ದಿನಾಂಕ 16.12.2023ರ ಶನಿವಾರ ಸಂಜೆ 5 ಗಂಟೆಗೆ ನಿಧನರಾದರು. ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.12.2023ರ ಭಾನುವಾರ ಮಧ್ಯಾಹ್ನ 12ಕ್ಕೆ ಗ್ಲಾಸ್ ಹೌಸ್ ಪಕ್ಕ ಇರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

## ನಗರದಲ್ಲಿ ಇಂದು ಪುನೀತ್ ರಾಜ್‌ಕುಮಾರ್ ಪುತ್ಥಳಿ ಅನಾವರಣ

ಶ್ರಮಜೀವಿ ಯುವಕರ ಸಂಘ ಮತ್ತು ಪುನೀತ್ ರಾಜ್‌ಕುಮಾರ್ ಫ್ರೆಂಡ್ಸ್ ಗ್ರೂಪ್ ಇವರ ವತಿಯಿಂದ ಪುನೀತ್ ರಾಜ್‌ಕುಮಾರ್ ಪುತ್ಥಳಿ ಅನಾವರಣ ಕಾರ್ಯಕ್ರಮವು ಕೆಟಿಜೆ ನಗರ ಎರಡನೇ ಮುಖ್ಯರಸ್ತೆ, 11 ಅಡ್ಡ ರಸ್ತೆಯಲ್ಲಿ ನಡೆಯಲಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ನೆರವೇರಲಿದ್ದು, ಬೆಳಿಗ್ಗೆ 11 ಗಂಟೆಗೆ ರಕ್ತದಾನ ಶಿಬಿರ, ಸಂಜೆ 6 ರಿಂದ ರಸಮಂಜರಿ ಕಾರ್ಯಕ್ರಮ ಹಾಗೂ ಸಂಜೆ 7 ಗಂಟೆಗೆ ಪುನೀತ್ ರಾಜ್‌ಕುಮಾರ್ ಪುತ್ಥಳಿ ಅನಾವರಣ ನಡೆಯಲಿದ್ದು, ಸಂಜೆ 7-30 ಶಾಲಾ ಮಕ್ಕಳಿಗೆ ಪಠ್ಯ-ಪುಸ್ತಕ ವಿತರಣೆ ಮಾಡಲಾಗುವುದು.

ಮುಖ್ಯ ಅತಿಥಿಗಳಾಗಿ ಲೋಕಿಕೆರೆ ನಾಗರಾಜ್, ಡಾ. ಟಿ.ಜಿ. ರವಿಕುಮಾರ್, ಎಮ್. ಆನಂದ, ಶ್ರೀನಿವಾಸ ದಾಸಕರಿಯಪ್ಪ, ಶಿವಗಂಗಾ ಶ್ರೀನಿವಾಸ್, ಜೆ.ಎನ್. ಶ್ರೀನಿವಾಸ್ ಮತ್ತಿತರರು ಆಗಮಿಸಲಿದ್ದಾರೆ.

## ವಿದೇಶಿ ವಿವಿ ಪದವಿ ಬೇಡ

**(1ನೇ ಪುಟದಿಂದ)** ಪದವಿಗಳಿಗೆ ಆಯೋಗದ ಮಾನ್ಯತೆಯೂ ಇಲ್ಲ ಎಂದು ಜೋಷಿ ತಿಳಿಸಿದ್ದಾರೆ. ಪದವಿ ಹಾಗೂ ಡಿಪ್ಲೋಮಾ ಯೋಜನೆಗಳನ್ನು ಆನ್‌ಲೈನ್ ಮೂಲಕ ನೀಡುವ ಬಗ್ಗೆ ಕೆಲ ಎಡ್‌ಟೆಕ್ ಕಂಪನಿಗಳು ಪತ್ರಿಕೆಗಳು, ಸಾಮಾಜಿಕ ಮಾಧ್ಯಮ ಹಾಗೂ ಟಿ.ವಿ.ಗಳ ಮೂಲಕ ಜಾಹೀರಾತು ನೀಡುತ್ತಿವೆ. ಮಾನ್ಯತೆ ಪಡೆಯದ ಪದವಿಗಳನ್ನು ನೀಡುತ್ತಿರುವ ಎಡ್‌ಟೆಕ್ ಕಂಪನಿಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಅವರು ಹೇಳಿದ್ದಾರೆ.

ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಈ ರೀತಿಯ ಕೋರ್ಸ್‌ಗಳಿಗೆ ಸೇರುವಾಗ ಎಚ್ಚರಿಕೆ ವಹಿಸಬೇಕು. ಈ ರೀತಿಯ ಕೋರ್ಸ್‌ಗಳಿಗೆ ಸೇರಿದರೆ ಅವರದೇ ಹೊಣೆಗಾರಿಕೆಯಾಗಿರುತ್ತದೆ ಎಂದೂ ಜೋಷಿ ತಿಳಿಸಿದ್ದಾರೆ.

## ಕೊಮಾರನಹಳ್ಳಿಯಲ್ಲಿ ಇಂದು ಕನಕ ಜಯಂತಿ

ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿ ಗ್ರಾಮದಲ್ಲಿ ಕನಕ ಬ್ರಿಗೇಡ್ ವತಿಯಿಂದ ಇಂದು ಸಂಜೆ 5 ಗಂಟೆಗೆ ದಾಸ ಶ್ರೇಷ್ಠ ಶ್ರೀ ಭಕ್ತ ಕನಕ ದಾಸರ 536ನೇ ಜಯಂತ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ವಾರ ಭವಿಷ್ಯ

**ದಿನಾಂಕ : 17.12.2023 ರಿಂದ 23.12.2023ರವರೆಗೆ**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಸ್ವಾಭಿಮಾನ ಒಳ್ಳೆಯದೇ ಆದರೂ ಅದು ಅತಿಯಾದಲ್ಲಿ ದುರಭಿಮಾನವಾಗಬಹುದು, ಅದಕ್ಕೆ ಆಸ್ಪದ ಕೊಡಬೇಡಿ ಹಣಕಾಸಿನ ಹರಿವು ಉತ್ತಮವಾಗಿರುವುದರಿಂದ ಚಿಂತೆಬೇಡ, ಚರ ಅಥವಾ ಸ್ಥಿರ ಸೊತ್ತು ಕೊಳ್ಳಲು ಇದು ಸಕಾಲವಾಗಿದೆ. ದುಡುಕು ಸ್ವಭಾವ ಕಡಿಮೆಯಾಗಿ ನಡಾವಳಿಯಲ್ಲಿ ಬುದ್ಧಿವಂತಿಕೆ ಕಂಡುಬರಲಿದೆ. ಹಿರಿಯರ ಪ್ರೀತಿ, ವಿಶ್ವಾಸ ಗಳಿಸುವಿರಿ. ಆದರೆ ಹಳೇ ಕಾಯಿಲೆ ಮತ್ತೆ ಮರುಕಳಿಸುವ ಸಂಭವವಿದ್ದು, ಏರಿಳಿತ ಕಂಡುಬರುವ ಸಂಭವವಿದ್ದು, ಕೊಂಚ ನರಳಾಟ ಉಂಟಾಗಬಹುದು ವೈದ್ಯರ ಸಂಪರ್ಕದಲ್ಲಿರುವುದು ಮೇಲು. ಭಾನು-ಮಂಗಳ-ಬುಧ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ರೈತಾಪಿ ಮಿತ್ರರು ಕೃಷಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದು ಉತ್ತಮ, ಹಳೇ ವಾಹನ ಪದೇ ಪದೇ ರಿಪೇರಿಗೆ ಬರಲಿದೆ, ಲೇವಾ ದೇವಿ ವ್ಯವಹಾರದಲ್ಲಿ ಹೆಚ್ಚಿನ ನಷ್ಟವುಂಟಾಗಲಿದೆ. ಈ ವಿಚಾರವನ್ನು ತುಸು ಗಂಭೀರವಾಗಿ ಪರಿಗಣಿಸು ವುದು ಉತ್ತಮ, ಮಡದಿ, ಮಕ್ಕಳಿಂದ ವಿವಿಧ ಬೇಡಿಕೆಗಳು ಬರಲಿದ್ದು, ಖರ್ಚಿನ ಬಾಬ್ತು ಹೆಚ್ಚಾಗಲಿದೆ. ಹಿರಿಯರ ಆರೋಗ್ಯದ ವಿಚಾರದಲ್ಲಿ ತಜ್ಞವೈದ್ಯರ ಸಲಹೆ ಯಂತೆ ನಡೆದುಕೊಳ್ಳಿ, ಆರಕ್ಷಕ ವಿಭಾಗದಲ್ಲಿ ಕೆಲಸ ಮಾಡುವವರಿಗೆ ಪದೋನ್ನತಿ, ಜೊತೆಗೆ ಜವಾಬ್ದಾರಿಯೂ ಹೆಚ್ಚಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಉನ್ನತ ವಿದ್ಯಾಭ್ಯಾಸ ಮಾಡುತ್ತಿರುವವರಿಗೆ ಹಲವು ವಿಷಯಗಳು ಕಬ್ಬಿಣದ ಕಡಲೆಯಾಗಲಿವೆ. ತಾಳ್ಮೆಯಿಂದ ಕಲಿಯುವುದು ಉತ್ತಮ, ಆಸ್ತಿಗೆ ಸಂಬಂಧಪಟ್ಟ ದಾಖಲೆಗಳಲ್ಲಿ ತುಸು ಗೊಂದಲ ಕಂಡು ಬರಲಿದೆ. ಅದನ್ನು ಪರಿಹರಿಸಿಕೊಂಡು ನಂತರ ವ್ಯವಹರಿಸುವುದು ಮೇಲು. ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿದ್ದು, ಅದು ವೇಗ ಪಡೆದು ಕೊಳ್ಳಲು ರಾಜಕಾರಣಿಗಳ ಮೊರೆ ಹೋಗದೇ ವಿಧಿಯಿಲ್ಲ. ಆದಾಯ ನಿರೀಕ್ಷಿತ ಮಟ್ಟದಲ್ಲಿರುವುದರಿಂದ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕಂತೆ ಅಭಿವೃದ್ಧಿಯಿರಲಿದೆ, ಸಾಮಾಜಿಕ ಜೀವನದಲ್ಲಿ ಆಲಸ್ಯ ತನ ಕಂಡುಬರಲಿದೆ. ಆದರೆ ಇದು ಒಳ್ಳೆಯ ಸಂಗತಿಯಲ್ಲ ಎಂಬುದು ನೆನಪಿರಲಿ. ವಾರದ ಆರಂಭದಲ್ಲಿ ಏರುಗತಿಯಲ್ಲಿದ್ದ ವ್ಯಾಪಾರ-ವಹಿವಾಟು ವಾರಾಂತ್ಯದಲ್ಲಿ ತುಸು ಕುಂಠಿತಗೊಳ್ಳಲಿದೆ. ತಂದೆ-ಮಕ್ಕಳ ನಡುವೆಯಿದ್ದ ಭಿನ್ನಾಭಿಪ್ರಾಯ ದೂರವಾಗಿ ಬಾಂಧವ್ಯ ವೃದ್ಧಿಸಲಿದೆ. ಕೊಟ್ಟಸಾಲವನ್ನು ನಂಬಿಕೊಂಡು ಯಾವುದೇ ಯೋಜನೆಗಳನ್ನು ಜಾರಿಗೆ ತರಲು ಹೋಗಬೇಡಿ. ಕ್ರೀಡಾಪಟುಗಳಿಗೆ ಉತ್ತಮ ತರಬೇತುದಾರರು ಸಿಗುವರು. ಸೋಮ-ಮಂಗಳ-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಹಳೇ ಸಂಕಷ್ಟಗಳು ದೂರವಾಗಿ ಮನೆಯಲ್ಲಿ ಸಂತಸ, ಸಂಭ್ರಮ ನೆಲೆಸಲಿದೆ. ಬಂಧುಗಳು ವಿಶೇಷವಾಗಿ ನಿಮ್ಮನ್ನು ಅಭಿನಂದಿಸುವರು, ಕಳೆದು ಹೋಗಿದ್ದ ಅತಿಮುಖ್ಯವಾದ ವಸ್ತುವೊಂದು ಮರಳಿ ಸಿಗಲಿದೆ. ಮಹಿಳಾ ಉದ್ಯಮಿಗಳಿಗೆ ಸರ್ಕಾರದಿಂದ ಹೆಚ್ಚಿನ ನೆರವು ದೊರೆಯಲಿದೆ. ಅದು ದುರುಪಯೋಗವಾಗದಂತೆ ಎಚ್ಚರವಹಿಸಿ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಚೆನ್ನಾಗಿರಲಿ. ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುವವರು ಸ್ಥಳ ಬದಲಾವಣೆಗೆ ಯತ್ನಿಸುವರು ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಗೋ ಸೇವೆ ಮಾಡುವ ಅವಕಾಶ ಸಿಗಲಿದೆ. ಭಾನು-ಗುರು-ಶುಕ್ರ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಈ ಹಿಂದೆ ಅತ್ಯುತ್ಸಾಹದಿಂದ ಆರಂಭಿಸಿದ್ದ ಉದ್ಯಮವು ನಿಮ್ಮ ಆಲಸ್ಯತನದಿಂದಾಗಿ ಮಂದಗತಿಯಲ್ಲಿ ಸಾಗಲಿದೆ. ಸಮಾಜದ ಮುಖಂಡರಿಂದ ಉತ್ತಮ ಮಾರ್ಗದರ್ಶನ ದೊರೆಯಲಿದೆ. ಸದಾ ಬಾಧಿಸುತ್ತಿದ್ದ ಕಾಯಿಲೆ ತಹಬಂದಿಗೆ ಬರಲಿದೆ. ವ್ಯಾಪಾರ, ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭಾಂಶ ಬರದೇ ಇದ್ದರೂ ನಷ್ಟವಂತೂ ಖಂಡಿತಾಯಿಲ್ಲ ಕ್ರೀಡಾಪಟುಗಳು ತರಬೇತಿ ಸಮಯದಲ್ಲಿ ಗಾಯಗೊಳ್ಳ ಬಹುದು. ಮನೆಯಲ್ಲಿ ನಡೆಯಲಿರುವ ಮಂಗಳ ಕಾರ್ಯಗಳ ಸಿದ್ಧತೆ ಜೋರಾಗಿಯೇ ನಡೆಯಲಿದೆ ಗುರುಗಳ ಸೇವಾ ಭಾಗ್ಯಸಿಗಲಿದೆ. ಬುಧ-ಗುರು-ಶನಿ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ವೈಯುಕ್ತಿಕ ಸುಖ ಭೋಗಗಳ ಕಡೆ ಹೆಚ್ಚಿನ ಗಮನ ಕೊಡುವಿರಿ, ಇದರಿಂದ ಮನೆ ಸದಸ್ಯರ ಕೆಂಗಣ್ಣಿಗೆ ಗುರಿಯಾಗುವಿರಿ, ಗೆಳೆಯರು ಮಾಡಲಿರುವ ನೆರವನ್ನು ಸದುಪಯೋಗ ಮಾಡಿಕೊಳ್ಳಿ. ಆದಾಯದ ಮೂಲದಲ್ಲಿ ತುಸು ಕಡಿತ ಕಂಡುಬರುವುದರಿಂದ ಅದಕ್ಕೆ ತಕ್ಕಂತೆ ಜೀವನವನ್ನು ರೂಢಿಸಿಕೊಳ್ಳುವುದು ಮೇಲು, ಕೃಷಿಕರಿಗೆ ಸರ್ಕಾರದಿಂದ ಬರಬೇಕಾಗಿರುವ ಸಹಾಯ ಪದಾರ್ಥಗಳ ರೂಪದಲ್ಲಿ ಸಿಗಲಿದೆ. ಸೋದರಿಯೊಂದಿಗಿರುವ ಭಿನ್ನಾಭಿಪ್ರಾಯವನ್ನು ಆದಷ್ಟು ಬೇಗ ಬಗೆಹರಿಸಿಕೊಳ್ಳಿ. ಅತಿಯಾದ ಮೋಜು-ಮಸ್ತಿ ಆರೋಗ್ಯ ದೃಷ್ಟಿಯಿಂದ ಒಳ್ಳೆಯದಲ್ಲ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಗಳಿಕೆ ಹೆಚ್ಚಾದಷ್ಟೂ ಮನುಷ್ಯನ ಹವ್ಯಾಸಗಳೂ ಕೂಡ ಬದಲಾಗುತ್ತವೆ ಎಂಬುದಕ್ಕೆ ನೀವು ಈ ವಾರ ಉತ್ತಮ ಉದಾಹರಣೆಯಾಗುವಿರಿ. ಎದುರಾಳಿಗಳನ್ನು ಹಣಿಯುವ ತಂತ್ರ ನಿಮಗೆ ಕರಗತವಾಗಿದೆ. ಇಷ್ಟೆಲ್ಲಾ ಇದ್ದರೂ ಮಕ್ಕಳ ನಡಾವಳಿ ಯಲ್ಲಿ ಕಂಡುಬರುವ ಬದಲಾವಣೆ ನಿಮ್ಮನ್ನು ಚಿಂತೆಗೀಡು ಮಾಡಲಿದೆ. ಕೆಲಸ ಕಾರ್ಯಗಳು ಸುಗಮವಾಗಿ ಸಾಗುತ್ತಿದ್ದರೂ, ಅಲಕ್ಷಿಸುವುದು ಸರಿಯಲ್ಲ.ಕೊಟ್ಟ ಸಾಲ ಸಮಯಕ್ಕೆ ಮರಳಿ ಬರದೇ ನೀವೇ ಸಾಲಗಾರರಾಗಬೇಕಾಗಬಹುದು, ಶುಭ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಢ.ಬೆ.)**

ವ್ಯವಹಾರದಲ್ಲಿ ನಿಮ್ಮ ಹಣಕಾಸಿನ ನಿರ್ವಹಣೆ ರೀತಿಯನ್ನು ಎಲ್ಲರೂ ಮೆಚ್ಚುವರು, ರಾಜಕಾರಣಿಗಳನ್ನು ನಂಬಿ ಮಾಡುವ ಕೆಲಸಗಳು ನಷ್ಟಕ್ಕೆ ಕಾರಣವಾಗಲಿವೆ. ಅರಿವಿಲ್ಲದ ವಿಷಯದಲ್ಲಿ ನಿಮ್ಮ ಮಧ್ಯಸ್ಥಿಕೆ ಬೇಡ. ಇಲ್ಲವಾದಲ್ಲಿ ಧನಮಾನ ಹಾನಿಯಾಗಬಹುದು, ಪಕ್ಷದ ವರಿಷ್ಠರೊಂದಿಗೆ ಉತ್ತಮ ಬಾಂಧವ್ಯ ಬೆಳೆಯಲಿದೆ. ಈ ಹಿಂದೆ ಇಷ್ಟಪಟ್ಟು ಕೊಂಡ ಆಸ್ತಿಯ ವಿಚಾರದಲ್ಲಿ ಹೊಸದೊಂದು ಸಮಸ್ಯೆ ಎದುರಾಗಲಿದೆ. ಅದನ್ನು ಮಾತುಕತೆ ಮುಖಾಂತರ ಬಗೆಹರಿಸಿಕೊಳ್ಳುವುದು. ಮೇಲು. ಮಹಿಳಾ ನೌಕರರಿಗೆ ಉತ್ತಮ ದಿನಗಳು. ಗುರು ಚರಿತ್ರೆಯನ್ನು ಪಠಿಸಿ. ಬುಧ-ಗುರು-ಶುಕ್ರ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಆಲಸ್ಯತನ ಈ ವಾರ ದೂರವಾಗಲಿದೆ, ಇದರಿಂದಾಗಿ ಬದುಕಿನಲ್ಲಿ ಸಾಕಷ್ಟು ಪ್ರಗತಿ ಕಂಡುಬರಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಸುಧಾರಣೆಯಾಗಲಿದೆ. ಆದಾಯ ಕಡಿಮೆಯಿದ್ದರೂ ನೆಮ್ಮದಿಯ ಜೀವನ ಮಾಡುವಿರಿ, ನಿಮ್ಮ ಎಲ್ಲಾ ಕೆಲಸ, ಕಾರ್ಯಗಳಿಗೆ ಸಂಗಾತಿಯ ಬೆಂಬಲ ದೊರೆಯಲಿದೆ. ಆರೋಗ್ಯದ ವಿಷಯದಲ್ಲಿ ನಿಷ್ಕಾಳಜಿ ಬೇಡ, ವಿದೇಶದಲ್ಲಿ ನೆಲೆಸಿರುವವರು ತಮ್ಮ ವ್ಯಕ್ತಿತ್ವದಿಂದ ನೆರೆಹೊರೆಯವರ ಮನ ಗೆಲ್ಲುವರು, ಅಪರಿಚಿತರೊಂದಿಗೆ ಆಸ್ತಿ ಕೊಡುಕೊಳ್ಳುವ ವ್ಯವಹಾರ ಬೇಡ, ಗೋ ಸೇವೆ ಶ್ರದ್ಧೆಯಿಂದ ಮಾಡಿ. ಮಂಗಳ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಕೃಷಿಕ ಮಿತ್ರರು ತಮ್ಮ ಬೆಳೆಯನ್ನು ಮಾರಾಟ ಮಾಡುವ ವಿಚಾರದಲ್ಲಿ ಮಧ್ಯವರ್ತಿಗಳಿಂದ ಮೋಸ ಹೋಗುವ ಪ್ರಸಂಗ ಬರಲಿದೆ. ಈ ವಿಷಯದಲ್ಲಿ ಸಾಕಷ್ಟು ಎಚ್ಚರದಿಂದಿರುವುದು ಮೇಲು, ವಾಹನಗಳ ಬಿಡಿಭಾಗ ಮಾರಾಟಗಾರರಿಗೆ ಹೆಚ್ಚಿದ ವಹಿವಾಟಿನಿಂದಾಗಿ ಲಾಭವಾಗಲಿದೆ. ಲೆಕ್ಕ ಪರಿಶೋಧಕರಿಗೆ ಬಿಡುವಿಲ್ಲದ ಕೆಲಸದಿಂದಾಗಿ ಆರೋಗ್ಯದಲ್ಲಿ ವ್ಯತ್ಯಾಸವಾಗ ಬಹುದು, ಹಿರಿಯರು ತಮ್ಮ ಬದಲಾದ ನಡಾವಳಿಯಿಂದಾಗಿ ಸಮಾಜಕ್ಕೆ ಮಾದರಿಯಾಗುವರು, ಉಸಿರಾಟ ತೊಂದರೆ ಕಂಡುಬರಲಿದೆ. ವೈದ್ಯರನ್ನು ಕಾಣಿ. ಭಾನು-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ, 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನಿಮ್ಮ ನಡಾವಳಿಯಲ್ಲಿ ಕಂಡುಬರುತ್ತಿರುವ ಅಹಂಕಾರ ಲೋಕ ದೃಷ್ಟಿಯಿಂದ ಒಳ್ಳೆಯದಲ್ಲ, ಇದು ನಿಮ್ಮ ಅವನತಿಗೂ ಕಾರಣವಾಗಬಹುದು, ಹಿರಿಯರಿಂದ ಬರಬೇಕಾಗಿರುವ ನಿಮ್ಮ ಪಾಲು ಇಷ್ಟರಲ್ಲೇ ಕೈ ಸೇರಲಿದೆ, ಚಿಕ್ಕಮಕ್ಕಳಿಗೆ ಸಾಕು ಪ್ರಾಣಿಗಳಿಂದ ತೊಂದರೆಯಾಗಲಿದೆ, ಸರ್ಕಾರೀ ನೌಕರರಿಗೆ ತಾವು ಮಾಡುತ್ತಿರುವ ಕೆಲಸಗಳಲ್ಲಿ ಗೊಂದಲ ಮಾಡಿಕೊಂಡು ಮೇಲಾಧಿಕಾರಿಗಳ ಅವ ಕೃಪೆಗೆ ಪಾತ್ರರಾಗುವರು, ಸೋದರನ ವಿವಾಹದ ವಿಚಾರದಲ್ಲಿ ದ್ವಂದ್ವ ಕಾಣಿಸಿಕೊಳ್ಳಲಿದ್ದು, ಮಾತುಕತೆ ಮುಂದೆ ಹೋಗಬಹುದು ವಿದ್ಯಾರ್ಥಿಗಳಿಗೆ ಉತ್ತಮ ದಿನ. ಸೋಮ-ಗುರು-ಶನಿ-ಶುಭ ದಿನಗಳು.

**ಈ ವಾರದ ವಿಶೇಷ :**
**ದಿನಾಂಕ:18.12.2023ನೇ ಸೋಮವಾರ ಸುಬ್ರಹ್ಮಣ್ಯ ಷಷ್ಠೀ ಚಂಪಾ ಷಷ್ಠೀ, ಶ್ರೀಕ್ಷೇತ್ರ ಕುಕ್ಕೇ ಸುಬ್ರಹ್ಮಣ್ಯದಲ್ಲಿ ರಥೋತ್ಸವ.**
**ದಿನಾಂಕ: 23.12.2023 ನೇ ಶನಿವಾರ ವೈಕುಂಠ ಏಕಾದಶಿ ಗೀತಾ ಜಯಂತಿ.**

# ಅಂತರ್ಮುಖಿಯ ಅನುಭಾವ, ಬಹಿರ್ಮುಖಿಯ ವಿಜ್ಞಾನ

## ವಿದ್ಯಾರ್ಥಿಗಳು ಅರಿವು ಹೆಚ್ಚಿಸಿಕೊಳ್ಳಲು ಇಸ್ರೋ ವಿಜ್ಞಾನಿ ಶಿವಕುಮಾರ್ ಎಸ್.ಪಾಟೀಲ್ ಕರೆ



ದಾವಣಗೆರೆ, ಡಿ. 16 - ನಾವು ಅಂತರ್ಮುಖಿ ಯಾದಾಗ ಅನುಭಾವಿಗಳಾಗುತ್ತೇವೆ, ಬಹಿರ್ಮುಖಿಗಳಾದಾಗ ವಿಜ್ಞಾನಿಗಳಾಗುತ್ತೇವೆ. ಅಂತರ್ಮುಖಿಯ ಅನುಭಾವ ಹಾಗೂ ಬಹಿರ್ಮುಖಿಯ ವಿಜ್ಞಾನ ಎರಡನ್ನೂ ವಿದ್ಯಾರ್ಥಿಗಳು ಅರಿಯಬೇಕು ಎಂದು ಇಸ್ರೋ ವಿಜ್ಞಾನಿ ಶಿವಕುಮಾರ್ ಎಸ್. ಪಾಟೀಲ್ ತಿಳಿಸಿದರು.

ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಪಾರ್ವತಮ್ಮ ಅವರ ಸ್ಮರಣಾರ್ಥ ಆಯೋಜಿಸಲಾಗಿದ್ದ 15ನೇ ವಿಜ್ಞಾನ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಹೊರ ಜಗತ್ತಿನಲ್ಲಿ ಇರುವ ಅಂಶಗಳನ್ನು ಪ್ರಶ್ನಿಸಿದಾಗ ಮಾತ್ರ ವಿಜ್ಞಾನಿಯಾಗಲು ಸಾಧ್ಯ. ಇನ್ನಷ್ಟು ವಿಷಯಗಳನ್ನು ತಿಳಿಯುವ ಲವಲವಿಕೆ ಇರಬೇಕು. ಹೊಸತರ ಹುಡುಕಾಟದಲ್ಲಿ ಜ್ಞಾನ ದೊರೆಯುತ್ತದೆ ಎಂದರು.

ಖಾಸಗಿ ಶಿಕ್ಷಣ ಸಂಸ್ಥೆಗಳು ದೇಶಕ್ಕೆ ಅನನ್ಯ, ಅಪಾರ ಹಾಗೂ ಅಪ್ರತಿಮ ಕೊಡುಗೆ ನೀಡುತ್ತಿವೆ. ಸಮಾಜದ ಕಟ್ಟ ಕಡೆಯ ವಿದ್ಯಾರ್ಥಿಗೂ ಉತ್ತಮ ಶಿಕ್ಷಣ ದೊರೆತಾಗ ದೇಶದ ಪ್ರಗತಿ ಸಾಧ್ಯ ಎಂದು ಪಾಟೀಲ್ ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮತ್ತು ಶೈಕ್ಷಣಿಕ ನಿರ್ದೇಶಕ ಎಂ.ಜಿ. ಈಶ್ವರಪ್ಪ, ವಿದ್ಯಾರ್ಥಿಗಳು ವಿಜ್ಞಾನಿಗಳ ಕುರಿತು ತಿಳಿಯಬೇಕು. ವಿಜ್ಞಾನ ಚಿಂತನೆಯಿಂದ ಹೊಸ ವಿಷಯಗಳನ್ನು ತಿಳಿಯಲು ಸಾಧ್ಯ. ವಿದ್ಯಾರ್ಥಿಗಳಲ್ಲಿ ಶಿಸ್ತು, ಶ್ರದ್ಧೆ ಹಾಗೂ ಶ್ರಮ ಇರಬೇಕು ಎಂದರು.

ಬಾಪೂಜಿ ವಿದ್ಯಾಸಂಸ್ಥೆ ಖಜಾಂಚಿ ಎ.ಎಸ್. ನಿರಂಜನ್ ಮಾತನಾಡಿ, ಕೃತಕ ಬುದ್ಧಿವಂತಿಕೆಯ ಬಳಕೆ ಸೀಮಿತ ಕ್ಷೇತ್ರಗಳಲ್ಲಿ ಮಾತ್ರ ಇರಬೇಕು. ಜನಸಂಖ್ಯೆ ಹೆಚ್ಚಾಗಿರುವ ಭಾರತದಲ್ಲಿ ಕೃತಕ ಬುದ್ಧಿವಂತಿಕೆಯಿಂದ ಉದ್ಯೋಗ ನಷ್ಟವಾಗಬಾರದು ಎಂದರು.

ಕಾಲೇಜಿನ ಪ್ರಾಂಶುಪಾಲ ಎಂ.ಪಿ. ರುದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯೋಪಾ ಧ್ಯಾಯ ಟಿ.ಎಂ. ಶರಣಪ್ಪ ಉಪಸ್ಥಿತರಿದ್ದರು. ದರ್ಶನ್ ಪ್ರಾರ್ಥಿಸಿದರೆ, ಕೆ.ಸಿ. ಶಿವಶಂಕರ್ ನಿರೂಪಿಸಿದರು. ಉಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರೆ ಹೆಚ್.ಸಿ. ವಿನಯಕುಮಾರ್ ವಂದಿಸಿದರು.

### ಉಪಗ್ರಹಗಳೂ ಮನುಷ್ಯರಂತೆ ಸ್ವತಂತ್ರ

ಉಪಗ್ರಹಗಳೂ ಕೂಡ ಮನುಷ್ಯರಂತೆ ಸ್ವತಂತ್ರವಾಗಿ ಕೆಲಸ ಮಾಡುತ್ತವೆ. ಉಡಾವಣೆಗೆ ಎರಡು ನಿಮಿಷಗಳ ಮುಂಚೆಯೇ ಉಪಗ್ರಹಗಳ ಮೇಲೆ ನಾವು ಹೊಂದಿರುವ ಹಿಡಿತ ಮುಗಿದಿರುತ್ತದೆ ಎಂದು ಇಸ್ರೋ ವಿಜ್ಞಾನಿ ಶಿವಕುಮಾರ್ ಎಸ್. ಪಾಟೀಲ್ ಹೇಳಿದರು.

ಉಡಾವಣೆಗೆ ಎರಡು ನಿಮಿಷ ಮುಂಚೆ ಇಡೀ ವ್ಯವಸ್ಥೆಯನ್ನು ಕಂಪ್ಯೂಟರ್ ನಿಯಂತ್ರಣಕ್ಕೆ ಕೊಡಲಾಗುತ್ತದೆ. ನಂತರ ಉಡಾವಣೆಯಿಂದ ಹಿಡಿದು ಕಕ್ಷೆ ಸೇರುವವರೆಗೆ ಎಲ್ಲವೂ ಅವುಗಳ ನಿಯಂತ್ರಣದಲ್ಲಿರುತ್ತದೆ ಎಂದರು. ಉಪಗ್ರಹಗಳು ಉಡಾವಣೆಯಾಗಿ ಬಾಹ್ಯಾಕಾಶ ಕಕ್ಷೆ ಸೇರಿದ ನಂತರವೂ ಅವು ಬಹುತೇಕ ಮನುಷ್ಯರ ರೀತಿಯಲ್ಲಿ ಸ್ವಂತವಾಗಿ ಕಾರ್ಯನಿರ್ವಹಿಸುತ್ತವೆ. ಕಾರ್ಯನಿರ್ವಹಣೆ ಕುರಿತು ಅವೇ ಸ್ವಂತ ನಿರ್ಧಾರ ತೆಗೆದುಕೊಳ್ಳುತ್ತವೆ ಎಂದು ಪಾಟೀಲ್ ತಿಳಿಸಿದರು.

ಕೆಲವೊಮ್ಮೆ ಉಪಗ್ರಹಗಳು ತೊಡಕು ಎದುರಿಸಿದಾಗ ಮಾತ್ರ, ಸೀಮಿತವಾಗಿ ನಾವು ನಿಯಂತ್ರಣ ಮಾಡುತ್ತೇವೆ ಎಂದು ಹೇಳಿದರು.

ಉಪಗ್ರಹಗಳಲ್ಲಿ ಸೂರ್ಯ, ನಕ್ಷತ್ರ ಹಾಗೂ ಭೂ ಸಂಬಂಧದ ಸೆನ್ಸಾರ್ ಅಳವಡಿಸಲಾಗಿರುತ್ತದೆ. ಇವುಗಳು ಉಪಗ್ರಹಗಳ 'ಕಣ್ಣು'ಗಳಿದ್ದಂತೆ. ಈ ಸೆನ್ಸಾರ್‌ಗಳ ಮೂಲಕ ಉಪಗ್ರಹಗಳು ದಿಕ್ಕು ಅರಿಯುತ್ತವೆ ಎಂದು ಪಾಟೀಲ್ ಹೇಳಿದರು.

# ಶುಶ್ರೂಷಕರು ಕೌಶಲ್ಯತೆ ರೂಢಿಸಿಕೊಂಡು ನರ್ಸಿಂಗ್ ಪ್ರಾಮುಖ್ಯತೆ ಹೆಚ್ಚಿಸಬೇಕು




ದಾವಣಗೆರೆ, ಡಿ. 16- ವಿದ್ಯಾರ್ಥಿಗಳು ಶುಶ್ರೂಷ ಜ್ಞಾನದ ಜೊತೆಗೆ ಕೌಶಲ್ಯತೆ ರೂಢಿಸಿಕೊಂಡು ಭವಿಷ್ಯದಲ್ಲಿ ನರ್ಸಿಂಗ್ ಪ್ರಾಮುಖ್ಯತೆಯನ್ನು ಹೆಚ್ಚಿಸಬೇಕು. ಕೇವಲ ಪ್ರಮಾಣ ಪತ್ರಕ್ಕಾಗಿನ ಶಿಕ್ಷಣಕ್ಕೆ ಇಂದು ಸಮಾಜದಲ್ಲಿ ಪ್ರಾಮುಖ್ಯತೆ ಕೊಡುವುದಿಲ್ಲ ಎಂದು ಬೆಂಗಳೂರಿನ ಆರ್.ವಿ. ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ಆರ್. ಗಜೇಂದ್ರಸಿಂಗ್ ತಿಳಿಸಿದರು.

ನಗರದ ರಾಘವೇಂದ್ರ ನರ್ಸಿಂಗ್ ಶಾಲೆ ಮತ್ತು ಕಾಲೇಜಿನ 18ನೇ ಬ್ಯಾಚ್ ಡಿಪ್ಲೋಮಾ ನರ್ಸಿಂಗ್ ಮತ್ತು 12ನೇ ಬ್ಯಾಚ್ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಕುವೆಂಪು ಕನ್ನಡ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಪ್ರತಿಜ್ಞಾ ವಿಧಿ ಬೋಧನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ರಾಘವೇಂದ್ರ ನರ್ಸಿಂಗ್ ಕಾಲೇಜಿನ ಕಾರ್ಯಕ್ರಮದಲ್ಲಿ ಬೆಂಗಳೂರಿನ ಆರ್. ವಿ. ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಆರ್. ಗಜೇಂದ್ರಸಿಂಗ್**

ಮೈಸೂರಿನ ಸರ್ಕಾರಿ ನರ್ಸಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ. ಎ.ಇ. ಪರಮೇಶಿ ಮಾತನಾಡಿ, ನರ್ಸಿಂಗ್ ಶಿಕ್ಷಣದ ಪ್ರಾರಂಭಕ್ಕೆ ಕಾರಣೀಕರ್ತರಾದ ಫ್ಲಾರೆನ್ಸ್ ನೈಟಿಂಗೇಲ್ ಅವರ ಕುರಿತು ಹಾಗೂ ಸದ್ಯದ ಪರಿಸ್ಥಿತಿಯಲ್ಲಿ ನರ್ಸಿಂಗ್ ಶಿಕ್ಷಣದ ಪ್ರಾಮುಖ್ಯತೆ ಮತ್ತು ಇಂದಿಗೂ ಬೆಳೆದುಕೊಂಡು, ಕಾಪಾಡಿಕೊಂಡು ಬಂದಿರುವ ಪಾವಿತ್ರ್ಯತೆಯ ಕುರಿತು ವಿವರಿಸಿದರು. ಸಂಸ್ಥೆಯ ಸಂಸ್ಥಾಪಕ ದಿ. ಸೈಮನ್ ಕೆ. ಅವರ ಒಡನಾಟವನ್ನೂ ಸ್ಮರಿಸಿದರು.

ಡಾ. ಸ್ನೇಹರೂಪ, ರಾಘವೇಂದ್ರ ಸಮೂಹ ಸಂಸ್ಥೆಗಳ ಆಡಳಿತಾಧಿಕಾರಿ ಮೃತ್ಯುಂಜಯ ತಿಗಡಿಮಠ ಮಾತನಾಡಿದರು. ಶ್ರೀಮತಿ ಮಂಜೂಷಾ ಸೈಮನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಡಾ. ಗಜೇಂದ್ರ ಸಿಂಗ್, ಡಾ. ಪರಮೇಶಿ ಅಶ್ವಿನಿ ಅಬೆ, ಸುಹಿತ್ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲರು ವಾರ್ಷಿಕ ವರದಿ ವಾಚಿಸಿದರು. ಅಧಿರಾ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಮುಸ್ಕಾನ್ ಸಂಗಡಿಗರು ನಾಡಗೀತೆ ಹಾಡಿದರು. ಕಾವ್ಯ, ದಿಲ್‌ಷಾದ್ ನಿರೂಪಿಸಿದರು. ದಿವ್ಯಾ ಬಣಕಾರ ವಂದಿಸಿದರು.

# ಲೋಕಸಭಾ ಚುನಾವಣೆಗೆ ಸಿದ್ಧತೆ ಸಿಎಂ ಸೇರಿ ಸಚಿವರು ದೆಹಲಿಗೆ

ಬೆಂಗಳೂರು, ಡಿ. 16 - ಬೆಳಗಾವಿಯ ಚಳಿಗಾಲದ ಅಧಿವೇಶನ ಮುಗಿಸಿಕೊಂಡು ಬಂದ ಮುಖ್ಯಮಂತ್ರಿ ಮತ್ತು ಅವರ ಸಂಪುಟದ ಅನೇಕ ಸದಸ್ಯರು ದೆಹಲಿಯತ್ತ ಹೊರಟಿದ್ದಾರೆ.

ಸಚಿವ ಆಕಾಂಕ್ಷಿಗಳಾಗಿದ್ದ ಹಿರಿಯ ಸದಸ್ಯರಿಗೆ ನಿಗಮ-ಮಂಡಳಿಗಳಿಗೆ ನೇಮಕಾತಿ ಹಾಗೂ ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿ ಕುರಿತು ಚರ್ಚೆ ನಡೆಸಲು ವರಿಷ್ಠರು ರಾಜ್ಯ ನಾಯಕರಿಗೆ ಬುಲಾವ್ ಮಾಡಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಾಳೆಯಿಂದ ಎರಡು - ಮೂರು ದಿನಗಳ ಕಾಲ ಕರ್ನಾಟಕದಲ್ಲಿನ ರಾಜಕೀಯ ಬೆಳವಣಿಗೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸುವ ಬಗ್ಗೆ ಚರ್ಚೆ ನಡೆಯಲಿದೆ.

ವರಿಷ್ಠರ ಆಹ್ವಾನದ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರುಗಳಾದ ಡಾ. ಜಿ. ಪರಮೇಶ್ವರ್, ಸತೀಶ್ ಜಾರಕಿಹೊಳಿ, ಕೆ.ಎಚ್. ಮುನಿಯಪ್ಪ, ಜಮೀರ್ ಅಹಮದ್ ಖಾನ್, ಎಂ.ಬಿ.ಪಾಟೀಲ್, ಲಕ್ಷ್ಮಿ ಹೆಬ್ಬಾಳ್ಕರ್, ಕೆ.ಜೆ. ಜಾರ್ಜ್ ಸೇರಿದಂತೆ ಹಿರಿಯ ಸಚಿವರು ದೆಹಲಿಗೆ ತೆರಳುತ್ತಿದ್ದಾರೆ.

ಪಂಚ ರಾಜ್ಯಗಳ ಚುನಾವಣಾ ವೈಫಲ್ಯದ ನಂತರ ಲೋಕಸಭಾ ಚುನಾವಣೆಯಲ್ಲಿ ಇದು ಪುನರಾವರ್ತನೆ ಆಗದಂತೆ ನೋಡಿಕೊಳ್ಳಲು ಅದರಲ್ಲೂ ಎಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಬೆಂಬಲ ಇದೆಯೋ ಅಂತಹ ಕಡೆ ಮುಂಜಾಗೃತಾ ಕ್ರಮ ಹಾಗೂ ಅಭ್ಯರ್ಥಿಗಳ ಆಯ್ಕೆ ಕಸರತ್ತನ್ನು ಎಐಸಿಸಿ ಆರಂಭಿಸಿದೆ.

ಕರ್ನಾಟಕದಿಂದ 28 ಕ್ಷೇತ್ರಗಳ ಪೈಕಿ 20 ಕ್ಷೇತ್ರಗಳ ಗೆಲುವಿನ ಗುರಿ ಇಟ್ಟಿರುವ ವರಿಷ್ಠರು ಎಲ್ಲ ರೀತಿಯ ತಂತ್ರಗಳನ್ನು ಹೆಣೆಯುತ್ತಿದ್ದಾರೆ.

ಸಿದ್ದರಾಮಯ್ಯ ಸಂಪುಟದಲ್ಲಿ ಅವಕಾಶ ದೊರೆಯದೇ ಅಸಮಾಧಾನಗೊಂಡಿರುವ ಹಿರಿಯ ಸದಸ್ಯರಿಗೆ ನಿಗಮ-ಮಂಡಳಿಗಳಲ್ಲಿ ಅವಕಾಶ ಕಲ್ಪಿಸುವುದು ಇದರಲ್ಲಿ ಸೇರಿದೆ.

ಈಗಾಗಲೇ ರಾಜ್ಯದ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ನಾಯಕರೊಂದಿಗೆ ಚರ್ಚಿಸಿ, 34 ಶಾಸಕರನ್ನು ಗುರುತಿಸಿ, ಇವರಿಗೆ ಯಾವ ನಿಗಮ-ಮಂಡಳಿ ನೀಡಬೇಕೆಂಬ ಒಂದು ಚಿತ್ರಣ ಸಿದ್ಧಪಡಿಸಿದ್ದಾರೆ.

ಯಾವ ಲೋಕಸಭಾ ಕ್ಷೇತ್ರದಲ್ಲಿ ಪಕ್ಷ ಗೆಲುವಿನ ಸಮೀಪ ಇದೆಯೋ ಅದನ್ನು ಮತ್ತಷ್ಟು ಭದ್ರ ಮಾಡಿಕೊಳ್ಳಲು ಅಂತಹ ಕ್ಷೇತ್ರಗಳಿಗೆ ನಿಗಮಗಳ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುತ್ತಿದೆ.

ಇದಕ್ಕಾಗಿಯೇ ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ನೇಮಕವಾಗಿದ್ದ ಸಚಿವರುಗಳನ್ನು ದೆಹಲಿಗೆ ಕರೆಸಿಕೊಂಡು ಅವರೊಂದಿಗೆ ಮುಖಾಮುಖಿ ಚರ್ಚೆ ನಡೆಸಲಿದ್ದಾರೆಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯದ ನಾಯಕರೊಂದಿಗೆ ಚರ್ಚೆ ಮಾಡಲಿದ್ದಾರೆ.

# ಒಳಪಂಗಡಗಳು ಒಂದಾಗಲು ಏಕರೀತಿ ಮೀಸಲಾತಿ ಅವಶ್ಯ

**(1ನೇ ಪುಟದಿಂದ)** ಶಿಕ್ಷಣ ಪಡೆದು ಉದ್ಯೋಗ ಪಡೆಯುತ್ತಿದ್ದಾರೆಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈ ಹಿಂದೆ ನಡೆದ ಜಾತಿ ಗಣತಿಯಲ್ಲಿ ಉಪ ಪಂಗಡಗಳ ಕಾಲಂ ಅವರವರ ಪಂಗಡಗಳ ಹೆಸರು ಬರೆಸಿರುವುದರಿಂದ ಎರಡು ಕೋಟಿ ಇರುವ ಜನಸಂಖ್ಯೆಯಲ್ಲಿ 70 ಲಕ್ಷಕ್ಕೆ ಇಳಿಯುವಂತಾಗಿದೆ ಎಂದರು.

ಒಳಪಂಗಡಗಳ ನಡುವೆ ವಿವಾಹ ಸಂಬಂಧಗಳನ್ನು ಏರ್ಪಡಿಸುವ ಮೂಲಕ ಒಳಪಂಗಡಗಳು ಒಂದೇ ವೇದಿಕೆ ಅಡಿ ತರುವುದರ ಜೊತೆಗೆ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಬೇಕಾಗಿದೆ.ಆಗ ಮಾತ್ರ ಸಮುದಾಯ ಸಮರ್ಥವಾಗಿ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಹೇಳಿದರು.


ರೋಣ ಶಾಸಕ ಜಿ.ಎಸ್. ಪಾಟೀಲ್ ಮಾತನಾಡಿ, ಸರ್ಕಾರದ ನೀತಿ ಮತ್ತು ರಾಜಕೀಯ ವ್ಯವಸ್ಥೆಯ ಕಾರಣ ಎರಡು ಲಕ್ಷ ಇರುವ ಜನಸಂಖ್ಯೆ ಕೇವಲ 70 ಲಕ್ಷಕ್ಕೆ ಇಳಿದಿರುವುದು ಬೇಸರದ ಸಂಗತಿ ಎಂದರು.

ಕೈ ಎತ್ತಿ ನೀಡುವ ಗುಣವನ್ನು ಹೊಂದಿರುವ ವೀರಶೈವ -ಲಿಂಗಾಯತರು ಇದೀಗ ಸರ್ಕಾರದ ಮುಂದೆ ಮೀಸಲಾತಿಗಾಗಿ ಕೈ ಚಾಚುವಂತಾಗಿದೆ. ಇದು ನಿವಾರಣೆ ಆಗಬೇಕಾದರೆ ಒಳಪಂಗಡಗಳು ಎಲ್ಲಾ ಒಂದಾಗಬೇಕಾಗಿದೆ ಎಂದು ಹೇಳಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಗುಡಿ-ಗುಂಡಾರಗಳಿಗೆ ಅನುದಾನ ನೀಡುವುದಕ್ಕಿಂತ ಶಾಲೆ, ವಿದ್ಯಾರ್ಥಿ ನಿಲಯಗಳಿಗೆ ನೀಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ವಿದ್ಯಾರ್ಥಿಗಳಿಗೆ ಜ್ಞಾನದಾಸೋಹ ನೀಡುವ ಕಾರ್ಯ ಶ್ಲಾಘನೀಯ ಎಂದರು.

ಹೇಮರೆಡ್ಡಿ ಮಲ್ಲಮ್ಮ ಸಮಾಜದ ಜಿಲ್ಲಾಧ್ಯಕ್ಷ ಡಾ. ಕೊಟ್ರೇಶ್ ಬಿದ್ರಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಹೇಮರೆಡ್ಡಿ ಮಲ್ಲಮ್ಮ ವೀರಶೈವ -ಲಿಂಗಾಯತ ರಡ್ಡಿ ಸಮಾಜದ ಅಧ್ಯಕ್ಷ ಶೇಖರಗೌಡ ಮಾಲಿ ಪಾಟೀಲ್, ಪಾಲಿಕೆ ಆಯುಕ್ತರಾದ ರೇಣುಕಾ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆದಪ್ಪ, ಯುವ ವೇದಿಕೆ ಅಧ್ಯಕ್ಷ ಅನಿಲ್, ಪಾಲಿಕೆ ಸದಸ್ಯ ಕಲ್ಲಳ್ಳಿ ನಾಗರಾಜ್, ಸಮಾಜದ ಮುಖಂಡರಾದ ಗಿರಿರಾಜ ರೆಡ್ಡಿ, ಡಆ. ಸುನೀಲ್ ಬ್ಯಾಡಿಗಿ, ಜಿ.ಸಿ. ನಾಮದೇವ, ಜಿ. ಚಿದಾನಂದ, ವಿಶ್ವಂಬರ್, ನೀಲಕಂಠಪ್ಪ, ಜಿ.ಎಸ್. ವೀರೇಂದ್ರ, ಚಂದ್ರಮೌಳಿ, ಜಿ.ಹೆಚ್. ಕುಮಾರ್, ಬಿ.ಜಿ.ಪಾಟೀಲ್, ಲೋಕೇಶ್ ಮತ್ತಿತರರು ಭಾಗವಹಿಸಿದ್ದರು.

# ಸಂಸತ್ ಭದ್ರತೆ ಉಲ್ಲಂಘನೆ ನಿರುದ್ಯೋಗ ಕಾರಣ : ರಾಗಾ



ನವದೆಹಲಿ, ಡಿ. 16 – ಸಂಸತ್ತಿನಲ್ಲಿ ನಡೆದ ಭದ್ರತಾ ಉಲ್ಲಂಘನೆಗೆ ನಿರುದ್ಯೋಗ ಹಾಗೂ ಏರುತ್ತಿರುವ ಬೆಲೆಗಳೇ ಕಾರಣ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಶ್ಲೇಷಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯುವಕರಿಗೆ ಉದ್ಯೋಗ ಸಿಗುತ್ತಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೀತಿಗಳ ಕಾರಣದಿಂದ ಸಂಸತ್ತಿನ ಭದ್ರತಾ ಉಲ್ಲಂಘನೆಯಾಗಿದೆ ಎಂದವರು ಹೇಳಿದರು. ಸುದೀರ್ಘ ಕಾಲದಿಂದ ಯುವಕರಲ್ಲಿದ್ದ ಆಕ್ರೋಶ ಭದ್ರತಾ ಉಲ್ಲಂಘನೆಯಾಗಿ ಪರಿವರ್ತನೆ ಯಾಗಿದೆ. ನಿರುದ್ಯೋಗ ದೇಶ ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆಯಾಗಿದೆ ಎಂದವರು ಹೇಳಿದರು.

ರಾಹುಲ್ ಹೇಳಿಕೆಗಳನ್ನು ತಳ್ಳಿ ಹಾಕಿರುವ ಬಿಜೆಪಿ, ಕಾಂಗ್ರೆಸ್ ನಾಯಕ ಸದಾ ಅರ್ಥಹೀನವಾಗಿ ಮಾತನಾಡುತ್ತಿರುತ್ತಾರೆ. ನಿರುದ್ಯೋಗ ಪ್ರಮಾಣ ಈಗ ಆರು ವರ್ಷಗಳಲ್ಲೇ ಅತಿ ಕಡಿಮೆ ಇದೆ ಎಂದು ಹೇಳಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅರ್ಥ ಹೀನ ಮಾತು ಗಳನ್ನಾಡುವಲ್ಲಿ ಎಂದೂ ಹಿಂದೆ ಬೀಳುವುದಿಲ್ಲ. ನಿರುದ್ಯೋಗ ದರ ಈಗ ಆರು ವರ್ಷಗಳಲ್ಲೇ ಅತಿ ಕಡಿಮೆ ಶೇ.3.2ರಷ್ಟಿದೆ ಎಂದು ಬಿಜೆಪಿ ಐ.ಟಿ. ವಿಭಾಗದ ಉಸ್ತುವಾರಿ ಅಮಿತ್ ಮಾಳವೀಯ ಹೇಳಿದ್ದಾರೆ.

ಸಂಸತ್ತಿನ ಭದ್ರತೆ ಉಲ್ಲಂಘಿಸಿದವರು ಕಾಂಗ್ರೆಸ್, ಟಿ.ಎಂ.ಸಿ. ಹಾಗೂ ಸಿಪಿಐ (ಎಂ) ಜೊತೆ ಹೊಂದಿರುವ ಸಂಪರ್ಕಗಳ ಬಗ್ಗೆ ಅವರು ವಿವರಣೆ ನೀಡಬೇಕು. ಅಸೀಮ್ ಸರೊಡೆ ಭಾರತ್ ಜೋಡೋ ಯಾತ್ರೆಯ ಭಾಗವಾಗಿದ್ದರು. ಅವರು ಸಂಸತ್ ಭದ್ರತೆ ಉಲ್ಲಂಘಿಸಿದವರಿಗೆ ಕಾನೂನು ನೆರವು ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

# ಬೆಳಗಾವಿ ಘಟನೆ ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆ

ಬೆಂಗಳೂರು, ಡಿ. 16 – ಬೆಳಗಾವಿಯಲ್ಲಿ ಮಹಿಳೆ ಬೆತ್ತಲೆಗೊಳಿಸಿ ಹಲ್ಲೆ ನಡೆಸಿದ ಪ್ರಕರಣವನ್ನು ಖಂಡಿಸಿ ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ ನಡೆಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಇವರನ್ನು ಬಂಧಿಸುವಲ್ಲಿ ಸರ್ಕಾರ ವಿಫಲವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂತ್ರಸ್ತೆಯ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು.

ಬೆಂಗಳೂರಿನಲ್ಲಿ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದರು. ನಂತರ ಅವರನ್ನು ಬಂಧಿಸಲಾಯಿತು. ಬೆಳಗಾವಿಯಲ್ಲಿ ಬಿಜೆಪಿಯ ಸತ್ಯಶೋಧನಾ ತಂಡವು ಸಂತ್ರಸ್ತೆಯ ಮನೆಗೆ ಭೇಟಿ ನೀಡಿತು. ನಂತರ ಮಾತನಾಡಿದ ತಂಡದ ಸದಸ್ಯರಲ್ಲಿ ಒಬ್ಬರಾದ ಲಾಕೆಟ್ ಚಟರ್ಜಿ, ಆರಂಭದಲ್ಲಿ ಆಡಳಿತ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ ಎಂದು ಹೇಳಿದರು.

ಪೊಲೀಸರು ಪ್ರಕರಣ ದಾಖಲಿಸಲು ಹಿಂಜರಿದಿದ್ದರು. ಹೈಕೋರ್ಟ್ ಚಾಟಿ ಬೀಸಿದ ನಂತರವೇ ಸರ್ಕಾರ ಕ್ರಮಕ್ಕೆ ಮುಂದಾಗಿತ್ತು ಎಂದವರು ಆರೋಪಿಸಿದರು.





ದಾವಣಗೆರೆ ಜಿ॥ ತಾ॥ **ಬಾವಿಹಾಳ್** ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ
**ಶ್ರೀ ಕರಿಯಮ್ಮ ದೇವಿ ದೇವಸ್ಥಾನದ ಕಳಸಾರೋಹಣ ಮತ್ತು ಕುಂಭಮೇಳ ಕಾರ್ಯಕ್ರಮದ ಆಹ್ವಾನ ಪತ್ರಿಕೆ**

**ದಿನಾಂಕ 17-12-2023ನೇ ಭಾನುವಾರ, ಸಮಯ : ಬೆಳಿಗ್ಗೆ 11 ಗಂಟೆಗೆ**
**ಸ್ಥಳ : ಬಾವಿಹಾಳ್ ಗ್ರಾಮ, ದಾವಣಗೆರೆ ತಾ॥, ಜಿ॥.**

**ದಿವ್ಯ ಸಾನ್ನಿಧ್ಯ :**
**ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ ಶ್ರೀ ಶ್ರೀ 1108 ಪರಮಪೂಜ್ಯ ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.

**ಶ್ರೀ ಶ್ರೀಗಳವರ ಆಗಮನ : ಬೆಳಿಗ್ಗೆ 11 ಗಂಟೆಗೆ**
ಬಾವಿಹಾಳ್ ಗ್ರಾಮಸ್ಥರಿಂದ ಶ್ರೀಗಳಿಗೆ ಸ್ವಾಗತ.

**ಮುಖ್ಯ ಅತಿಥಿಗಳು :**
**ಡಾ॥ ಶಾಮನೂರು ಶಿವಶಂಕರಪ್ಪನವರು**
ಶಾಸಕರು, (ವಿಧಾನಸಭೆ) ದಾವಣಗೆರೆ ದಕ್ಷಿಣ ವಲಯ.
**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್‌ರವರು**
ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು
**ಶ್ರೀ ಜಿ.ಎಂ. ಸಿದ್ದೇಶ್ವರರವರು,** ಮಾನ್ಯ ಸಂಸದರು, ದಾವಣಗೆರೆ.
**ಶ್ರೀ ಕೆ.ಎಸ್. ಬಸವಂತಪ್ಪ,** ಶಾಸಕರು, (ವಿಧಾನಸಭೆ) ಮಾಯಕೊಂಡ ಕ್ಷೇತ್ರ.

**ವಿಶೇಷ ಆಹ್ವಾನಿತರು :**
**ಶ್ರೀ ಬಸವರಾಜ ಶಿವಗಂಗಾ,** ಶಾಸಕರು, (ವಿಧಾನಸಭೆ) ಚನ್ನಗಿರಿ ಕ್ಷೇತ್ರ.
**ಶ್ರೀ ಬಿ.ಪಿ. ಹರೀಶ್,** ಶಾಸಕರು, (ವಿಧಾನಸಭೆ) ಹರಿಹರ ಕ್ಷೇತ್ರ.
**ಶ್ರೀ ಎಂ. ಚಂದ್ರಪ್ಪ,** ಶಾಸಕರು, (ವಿಧಾನಸಭೆ) ಹೊಳಲ್ಕೆರೆ ಕ್ಷೇತ್ರ.
**ಪ್ರೊ. ಲಿಂಗಣ್ಣ,** ಮಾಜಿ ಶಾಸಕರು, ಮಾಯಕೊಂಡ
**ಶ್ರೀ ಬಸವರಾಜನಾಯ್ಕ,** ಮಾಜಿ ಶಾಸಕರು, ಮಾಯಕೊಂಡ.
**ಶ್ರೀ ಎಂ.ಪಿ. ರೇಣುಕಾಚಾರ್ಯ,** ಮಾಜಿ ಶಾಸಕರು, ಹೊನ್ನಾಳಿ.
**ಶ್ರೀಮತಿ ಆಶಾ ನಾಗರಾಜ್,** ಅಧ್ಯಕ್ಷರು, ಗ್ರಾಮ ಪಂಚಾಯಿತಿ, ನರಗನಹಳ್ಳಿ.
**ಶ್ರೀ ಕಲ್ಲೇಶಪ್ಪನವರು,** ಸದಸ್ಯರು, ಗ್ರಾಮ ಪಂಚಾಯಿತಿ, ಬಾವಿಹಾಳ್.
**ಶ್ರೀಮತಿ ಮೀನಾಕ್ಷಮ್ಮ,** ಸದಸ್ಯರು, ಗ್ರಾಮ ಪಂಚಾಯಿತಿ, ಬಾವಿಹಾಳ್.
**ಶ್ರೀಮತಿ ಅಕ್ಕಮ್ಮ,** ಸದಸ್ಯರು, ಗ್ರಾಮ ಪಂಚಾಯಿತಿ, ಬಾವಿಹಾಳ್.

**ಸರ್ವರಿಗೂ ಆದರದ ಸುಸ್ವಾಗತ ಬಯಸುವವರು :**
**ಶ್ರೀ ಕರಿಯಮ್ಮದೇವಿ ದೇವಸ್ಥಾನ ಸಮಿತಿ ಹಾಗೂ ಬಾವಿಹಾಳ್ ಗ್ರಾಮಸ್ಥರು**

## ಇಂದಿನಿಂದ ಧನುರ್ಮಾಸ ಪೂಜಾನುಷ್ಠಾನ



ದಾವಣಗೆರೆ ತಾಲ್ಲೂಕು ಆವರಗೊಳ್ಳ ಶ್ರೀಕ್ಷೇತ್ರ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಇಂದಿನಿಂದ ಜನವರಿ 14 ರವರೆಗೆ ಒಂದು ತಿಂಗಳ ಪರ್ಯಂತರ ಲೋಕಕಲ್ಯಾಣಕ್ಕಾಗಿ ತಮ್ಮ 29 ನೇ ವರ್ಷದ ಧನುರ್ಮಾಸ ಪೂಜಾನುಷ್ಠಾನ ಕೈಗೊಂಡಿದ್ದಾರೆ.


ಭಕ್ತರ ದರ್ಶನಕ್ಕೆ ಯಥಾಸ್ಥಿತಿ ಅವಕಾಶ ಕಲ್ಪಿಸಲಾಗಿದೆ ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## '100 ದಿನ ಸಾವಿರ ಹಳ್ಳಿ, ಒಂದು ಗುರಿ' : ನಗರದಲ್ಲಿ ಇಂದು ಸಭೆ



ಶ್ರೀಮದ್ ಜಗದ್ಗುರು ರೇವಣಸಿದ್ಧೇಶ್ವರ ಸಿಂಹಾಸನ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಶಾಖಾಮಠ, ಕನಕಧಾಮ, ಹೊಸದುರ್ಗ, ಬೆಂಗಳೂರು ವಿಭಾಗದ ಪೀಠಾಧ್ಯಕ್ಷರಾದ ಶ್ರೀ ಈಶ್ವರಾನಂದ ಪುರಿ ಮಹಾಸ್ವಾಮಿಗಳವರ ನೇತೃತ್ವದಲ್ಲಿ ನಡೆಯುತ್ತಿರುವ '100 ದಿನ ಸಾವಿರ ಹಳ್ಳಿ ಒಂದು ಗುರಿ' ಕಾರ್ಯಕ್ರಮದ ಕುರಿತು ಚರ್ಚಿಸಲು ದಾವಣಗೆರೆ ತಾಲ್ಲೂಕಿನ ನಗರ ಮತ್ತು ಗ್ರಾಮೀಣ ಪ್ರದೇಶದ ಕುರುಬರ ಸಮಾಜದ ಪ್ರಮುಖರ ಸಭೆಯನ್ನು ರೋಟರಿ ಬಾಲಭವನದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಕರೆಯಲಾಗಿದೆ ಎಂದು ಅಣಬೇರು ಶಿವಮೂರ್ತಿ ತಿಳಿಸಿದ್ದಾರೆ.

# ಜಗತ್ತಿಗೆ ಒಬ್ಬನೇ ಉತ್ತಮ ಪುರುಷ ಅವನೇ ಪರಮಾತ್ಮನಾದ ಈಶ್ವರ



ದಾವಣಗೆರೆ,ಡಿ.16-ಜಗತ್ತಿಗೆಒಬ್ಬನೇ ಉತ್ತಮ ಪುರುಷ, ಅವನೊಬ್ಬನೇ ಪರಮಾತ್ಮ, ಅವನು ಮೂರು ಲೋಕದ ಅಧಿಪತಿ. ಅವನ ಹೆಸರೇ 'ಈಶ್ವರ' ಎಂದು ಭಗವದ್ಗೀತೆಯಲ್ಲಿ (ಅಧ್ಯಾಯ 15, ಶ್ಲೋಕ 17) (ಅಧ್ಯಾಯ 18, ಶ್ಲೋಕ 61) ಶ್ರೀ ಕೃಷ್ಣ ತಿಳಿಸಿದ್ದಾನೆ. ಈಶ್ವರ ಅಂದರೆ ತ್ರಿಶೂಲ ಹಿಡಿದ ಜಟಾಧಾರಿಯಲ್ಲ. ಜ್ಯೋತಿ ಸ್ವರೂಪನಾದ ಪರಮಾತ್ಮ ಎಂದು ನಾವು ತಿಳಿದುಕೊಳ್ಳಬೇಕು ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಹೇಳಿದರು.

ಇಲ್ಲಿನ ವಿದ್ಯಾನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ 13ನೇ ದಿನವಾದ ಶನಿವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ವಿಶ್ವಕ್ಕೇ ದಾರಿ ದೀಪವಾಗಿದ್ದ ನಾವು, ವಿಶ್ವಕ್ಕೆ ಪರಮಾತ್ಮನನ್ನು ಪರಿಚಯಿಸಿದವರು. ಎಲ್ಲಾ ಧರ್ಮ ಗ್ರಂಥಗಳು ಜನಿಸುವ ಮೊದಲೇ ಜಗತ್ತಿಗೆ ಏಕೇಶ್ವರ ಸಿದ್ಧಾಂತ, ಅನುಭೂತಿ, ಅನುಭಾವವನ್ನು, ಏಕೇಶ್ವರ ಉಪಾಸನೆಯನ್ನು ಕೊಟ್ಟವರು ಭಾರತೀಯರು. ಅಂತಹ ಸತ್ಯ ವಿಚಾರಗಳನ್ನು 51 61 ವರ್ಷಗಳ ಹಿಂದೆ ಕುರುಕ್ಷೇತ್ರದಲ್ಲಿ ನಡೆದಂತಹ ಕೃಷ್ಣಾರ್ಜುನರ ಸಂಭಾಷಣೆಯಲ್ಲಿ ನೀಡಲಾಗಿದೆ ಎಂದು ಹೇಳಿದರು.

ಈಶ್ವರನಾದ ಪರಮಾತ್ಮನ ಅನುಗ್ರಹದಿಂದ ಮಾತ್ರ ಮುಕ್ತಿ, ಶಾಂತಿ ಸಿಗುತ್ತದೆ ಎಂದು ಶ್ರೀ ಕೃಷ್ಣ ಹೇಳಿದ್ದರು. ಆದರೆ, ನಾವು ಪರಮಾತ್ಮನನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂದು ತಿಳಿಸಿದರು.

ಶ್ರೀರಾಮ ಹಾಗೂ ಶ್ರೀ ಕೃಷ್ಣರೂ ಈಶ್ವರನನ್ನು ಆರಾಧಿಸಿದ್ದಾರೆ. ಪಾಂಡವರ ಪರ ಗೆಲುವು ಸಾಧಿಸಲು ಸ್ವಯಂ ಶ್ರೀಕೃಷ್ಣ, ಪಾಂಡವರ ಜೊತೆಯಲ್ಲಿ 'ಸ್ಥಾನೇಶ್ವರ' ಜ್ಯೋತಿರ್ಲಿಂಗವನ್ನು ಪೂಜಿಸಿ, ವರವನ್ನು ಪಡೆದಿದ್ದಾರೆ. ಮತ್ತೊಂದೆಡೆ ಕಂಸ, ಸಾಲ್ವ, ದಂತವಕ್ರ ಇವರೆಲ್ಲರ ಹತ್ಯೆ ಮಾಡಿದ ದೋಷ ಪರಿಹಾರಕ್ಕಾಗಿ 'ಗೋಪೇಶ್ವರ' ಜ್ಯೋತಿರ್ಲಿಂಗವನ್ನು ಸ್ಥಾಪಿಸಿ, ಈಶ್ವರನ ಉಪಾಸನೆ ಮಾಡಿದ್ದಾನೆ. ಸೀತೆಯನ್ನು ಹೊತ್ತೊಯ್ದಿದ್ದ ರಾವಣನ ವಧೆಗೆ ಶ್ರೀರಾಮನೂ ಸಹ ಈಶ್ವರನನ್ನು ಪ್ರಾರ್ಥಿಸಿದ್ದ. ಈ ಬಗ್ಗೆಯೂ ರಾಮಾಯಣದಲ್ಲಿ ಉಲ್ಲೇಖ ಇದೆ ಎಂದು ಹೇಳಿದರು.

ಕುರುಕ್ಷೇತ್ರದಲ್ಲಿ ಜನನ-ಮರಣ ಚಕ್ರದ ಕುರಿತು ಅರ್ಜುನನಿಗೆ ಬೋಧಿಸುವ ಶ್ರೀಕೃಷ್ಣ, ತಾನು ಅನೇಕ ಜನ್ಮಗಳನ್ನು ಪಡೆದಿದ್ದಾಗಿಯೂ, ಅದು ತನಗೆ ನೆನಪಿರುವುದಾಗಿಯೂ, ನೀನು ಪಡೆದ ಜನ್ಮಗಳ ಬಗ್ಗೆ ನಿನಗೆ ನೆನಪಿಲ್ಲ ಎಂದೂ ವಿವರಿಸುತ್ತಾನೆ.

ವಿಷ್ಣುವಿನ ದಶಾವತಾರಗಳಲ್ಲಿ ಶ್ರೀಕೃಷ್ಣನ ಅವತಾರವೂ ಒಂದಾಗಿದೆ. ಅವನ ಅನೇಕ ಅವತಾರಗಳು ಮಾತೃ ಗರ್ಭದಿಂದಲೇ ಆಗಿವೆ. ಜನನ, ಮರಣ ಚಕ್ರ ಬಿಡಿಸಲಾಗದ ಪ್ರಕ್ರಿಯೆ ಆಗಿರುವುದರಿಂದ ನಾವು ದುಃಖಿಸುವ ಅಗತ್ಯವೇ ಇಲ್ಲ. ದೇಹಧಾರಿಯಾಗಿ ನಾವು ಎಲ್ಲಿ ಜನಿಸಬೇಕು, ಬೆಳೆಯ ಬೇಕು ಎಂಬ ವಿಚಾರವನ್ನು ಪಾಪ-ಪುಣ್ಯಕ್ರಮಗಳಿಗೆ ಅನುಸಾರವಾಗಿ ಸ್ವಯಂ ಪರಮಾತ್ಮನೇ ನಿರ್ಧರಿಸುತ್ತಾನೆ ಎಂದು ನುಡಿದರು.

ಶಿವನ ಭಕ್ತ ರಾಮ, ರಾಮನ ಭಕ್ತ ಹನುಮಂತ, ಹನುಮಂತನಿಗೆ ಮತ್ತೊಬ್ಬ ಭಕ್ತ, ಆ ಭಕ್ತನ ಸಮಾಧಿಯ ಪೂಜೆಯನ್ನು ಅವನ ಭಕ್ತರು ಮಾಡುತ್ತಾರೆ. ತಪಸ್ವಿ ಶಂಕರನು ಪರಮಾತ್ಮನಾದ ಈಶ್ವರನನ್ನು ಕುರಿತು ತಪಸ್ಸು ಮಾಡಿದ್ದಾನೆ, ಶಂಕರನ ಕುರಿತು ಗೌರಿಯು ತಪಸ್ಸು ಮಾಡಿದ್ದಾಳೆ, ಗೌರಿಶಂಕರರನ್ನು ಗಣೇಶನು ಅರ್ಚಿಸಿದ್ದಾನೆ. ಗಣೇಶನ ಭಕ್ತರ ಸಮಾಧಿಯ ಪೂಜೆ ಅವರ ಭಕ್ತರು ಮಾಡಿದ್ದಾರೆ. ಹೀಗೆ ವೈಷ್ಣವ ಮತ್ತು ಶೈವ ಪರಂಪರೆಯಲ್ಲಿ ನಾವು ಪೂಜಾರಿಗಳ ಪೂಜಾರಿಯಾಗಿ ಪ್ರಸ್ತುತ ದಿನಗಳಲ್ಲಿ ಈ ಹಂತದಲ್ಲಿದ್ದೇವೆ. ಪರಮಾತ್ಮನನ್ನು ಯತಾರ್ಥವಾಗಿ ಅರಿಯದ ಕಾರಣ, ನಾವು ಬೇರೆ ಬೇರೆ ದೇವರುಗಳನ್ನು ಸುತ್ತುತ್ತಿದ್ದೇವೆ ಎಂದು ಹೇಳಿದರು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಸಂಸ್ಥೆಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಿಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkanna-da) ವೀಕ್ಷಿಸಬಹುದು.

### ಯಾರು ಯಾರನ್ನು ಪೂಜಿಸುತ್ತಾರೋ ಅವರನ್ನೇ ಸೇರುತ್ತಾರೆ

ಯಾರು ದೇವತೆಗಳನ್ನು ಅಹಿಂಸಾತ್ಮಕ ಪದ್ಧತಿಯಿಂದ ಪೂಜಿಸುತ್ತಾರೋ ಅವರೇ ದೇವತೆಗಳ ಭಕ್ತರು. ರಾಜಸಿಕ ಜನ ಯಕ್ಷ ರಾಕ್ಷಸರನ್ನು ಪೂಜಿಸುತ್ತಾರೆ. ತಾಮಸಿಕ ಭಕ್ತರು ಭೂತ-ಪ್ರೇತಾದಿಗಳನ್ನು ಉಪಾಸನೆ ಮಾಡುತ್ತಾರೆ. ನಾವೆಲ್ಲಾ ಪರಮಾತ್ಮನನ್ನು ಯತಾರ್ಥವಾಗಿ ಅರಿಯದೇ ಬೇರೆ ಬೇರೆ ದೇವರ ಉಪಾಸನೆ ಮಾಡುತ್ತಿದ್ದೇವೆ.

ದೇವತೆಗಳನ್ನು ಪೂಜಿಸುವವರು ಸತ್ತ ಮೇಲೆ ದೇವತೆಗಳ ಬಳಿಯೇ ಹೋಗುತ್ತಾರೆ. ಹಾಗೆಯೇ ಪಿತೃ ಭಕ್ತಿ ವುಳ್ಳವರು ಪಿತೃವನ್ನು ಸೇರುತ್ತಾರೆ. ಭೂತಗಳನ್ನು ಪೂಜಿಸುವವರು ಭೂತಗಳನ್ನು ಸೇರುತ್ತಾರೆ. ನನ್ನನ್ನು ಪೂಜಿಸುವವರು ನನ್ನನ್ನೇ ಸೇರುತ್ತಾರೆ ಎಂಬುದು ಪರಮಾತ್ಮನಾದ ಈಶ್ವರನ ವಾಣಿಯಾಗಿದೆ ಎಂದು ಅಧ್ಯಾಯ 18, ಶ್ಲೋಕ 62ರಲ್ಲಿ ಶ್ರೀ ಕೃಷ್ಣ ತಿಳಿಸಿದ್ದಾನೆ.

## ನಗರದಲ್ಲಿ ಇಂದು ಚದುರಂಗ ಪಂದ್ಯಾವಳಿ

ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ಚೆಸ್ ಅಸೋಸಿಯೇಷನ್ ಹಾಗೂ ಲಯನ್ಸ್ ಕ್ಲಬ್, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಅಂತರ್ ಜಿಲ್ಲಾ ಮಟ್ಟದ ಚದುರಂಗ (ಚೆಸ್) ಪಂದ್ಯಾವಳಿಯು ಲಯನ್ಸ್ ಭವನದಲ್ಲಿ ಇಂದು ನಡೆಯಲಿದೆ.

ಬೆಳಿಗ್ಗೆ 11 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಡಾ. ಎಸ್.ಆರ್. ಹೆಗಡೆ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ನೀಲಿ ಉಮೇಶ್ ವಹಿಸುವರು. ಮುಖ್ಯ ಅತಿಥಿಯಾಗಿ ಎನ್.ಆರ್. ನಾಗಭೂಷಣರಾವ್ ಆಗಮಿಸುವರು.

ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಅಧ್ಯಕ್ಷತೆಯನ್ನು ಸುಬ್ರಹ್ಮಣ್ಯ ಭಟ್ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಬಿ.ಎಸ್. ನಾಗಪ್ರಕಾಶ್, ಎಸ್. ಓಂಕಾರಪ್ಪ ಆಗಮಿಸುವರು.

## ಜಗಳೂರು ತಾ.ಪಂ.ನಲ್ಲಿ ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ಜಗಳೂರು, ಡಿ.16- ದಾವಣಗೆರೆ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್ ಕೌಲಾಪೂರೆ ಅವರು, ಜಗಳೂರು ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಅಧ್ಯಕ್ಷತೆಯಲ್ಲಿ ಇದೇ ದಿನಾಂಕ 19 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ರವರೆಗೆ ಸಾರ್ವಜನಿಕರ ಅಹವಾಲು ಸ್ವೀಕರಿಸುವರು.

## ಶ್ರೀ ನೀಲಕಂಠೇಶ್ವರ ಸ್ವಾಮಿ ಕಾರ್ತಿಕ ದೀಪೋತ್ಸವ ನಾಳೆ

ದಾವಣಗೆರೆ, ಡಿ. 16- ಇಲ್ಲಿನ ಕೆಟಿಜೆ ನಗರ 2ನೇ ಮೇನ್, 14ನೇ ಕ್ರಾಸ್‌ನಲ್ಲಿರುವ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 18ರ ಸೋಮವಾರ ಸಂಜೆ 7.15ಕ್ಕೆ ಶ್ರೀ ನೀಲಕಂಠೇಶ್ವರ ಸ್ವಾಮಿ ಕಾರ್ತಿಕ ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಕುರುಹಿನಶೆಟ್ಟಿ ನೇಕಾರ ಸಮಾಜ ಸಂಘದವರು ತಿಳಿಸಿದ್ದಾರೆ.

## ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ದಾವಣಗೆರೆಯ ಇಂಡಸ್ಟ್ರಿಯಲ್ ಏರಿಯಾ, ಲೋಕಿಕೆರೆರಸ್ತೆ, ಸುಬ್ರಹ್ಮಣ್ಯನಗರ, ಎಸ್.ಎ. ರವೀಂದ್ರನಾಥ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಶಂಕರ್‌ನಾಗ್ ಸ್ಮಾರಕ ನಿರ್ಮಾಣಕ್ಕೆ ನೆರವು : ಎಸ್ಸೆಸ್



ದಾವಣಗೆರೆ, ಡಿ. 16- ಕನ್ನಡ ಚಿತ್ರರಂಗದಲ್ಲಿ ಖ್ಯಾತ ನಟರಾಗಿ ಹೆಸರು ಮಾಡಿದ್ದ ಶಂಕರ್‌ನಾಗ್ ಅವರ ಅಪಘಾತ ಘಟನೆಯಿಂದಾಗಿ ಇಡೀ ಚಿತ್ರರಂಗಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಅವರ ಸ್ಮಾರಕ ನಿರ್ಮಾಣಕ್ಕೆ ಸಹಕರಿಸುವುದಾಗಿ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ಸಿನಿಮಾ ಸಿರಿ ಸಂಸ್ಥೆ ವತಿಯಿಂದ ಇಂದು ಸಂಜೆ ಹಮ್ಮಿಕೊಂಡಿದ್ದ ಕರ್ನಾಟಕ ಸುವರ್ಣ ಸಂಭ್ರಮ ಆಚರಣೆ ಹಾಗೂ ಸಂಗೀತ ಸಂಜೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ನಿಧನ ಹೊಂದಿದ ನಟಿ ಲೀಲಾವತಿ ಕನ್ನಡ ಚಿತ್ರರಂಗಕ್ಕೆ ನೀಡಿದ ಕೊಡುಗೆ ಅಪಾರವಾದುದು ಎಂದು ಸ್ಮರಿಸಿದ ಎಸ್ಸೆಸ್, ಸಂಗೀತದ ರಸದೌತಣ ನೀಡುತ್ತಿರುವ ಸಿನಿಮಾ ಸಿರಿ ಸಂಸ್ಥೆಯ ಕಾರ್ಯ ಪ್ರಶಂಸನೀಯ ಎಂದರು.

ಚಿತ್ರನಟರೂ, ಮಾಜಿ ಸಚಿವರೂ ಆದ ಬಿ.ಸಿ. ಪಾಟೀಲ್ ಮಾತನಾಡಿ, ವಿದ್ಯಾರ್ಥಿ ದೆಸೆಯಿಂದ ಮತ್ತು ಅಧಿಕಾರಿಯಾಗಿ ಸೇವೆ ಸಲ್ಲಿಸಿದ ನನಗೂ ಹಾಗೂ ದಾವಣಗೆರೆಗೂ ಅವಿನಾಭಾವ ಸಂಬಂಧವಿದೆ. ನಾನು ಚಿತ್ರರಂಗ ಪ್ರವೇಶಿಸಿದ್ದು ದಾವಣಗೆರೆಯಿಂದಲೇ, 'ನಿಷ್ಕರ್ಶ' ಚಿತ್ರಕ್ಕೆ ಕ್ಲಾಪ್ ಮಾಡಿದ್ದು ಶಾಮನೂರು ಶಿವಶಂಕರಪ್ಪನವರು ಎಂದು ಸ್ಮರಿಸಿಕೊಂಡರು.

ಇಂದಿನ ದಿನಗಳಲ್ಲಿ ಬೆರಳ ತುದಿಯಲ್ಲಿಯೇ ಮನರಂಜನೆ ಮೊಬೈಲ್ ಮೂಲಕ ಸಿಗುತ್ತಿದೆ. ಎಲ್ಲ ಚಿತ್ರಗಳನ್ನು ಮೊಬೈಲ್ ಗಳಲ್ಲಿ ನೋಡುವ ಅವಕಾಶವಿದೆ. ಆದ್ದರಿಂದ ಮುಂಬರುವ ದಿನಗಳಲ್ಲಿ ಸಿನಿಮಾ ರಂಗಕ್ಕೆ ಭವಿಷ್ಯವಿಲ್ಲ ಎಂಬ ಆತಂಕ ವ್ಯಕ್ತಪಡಿಸಿದರು.

ಸಿನಿಮಾ ಸಿರಿ ಅಧ್ಯಕ್ಷ ಸುರಭಿ ಶಿವಮೂರ್ತಿ ಸ್ವಾಗತಿಸಿದರು. ಸಾಲಿಗ್ರಾಮ ಗಣೇಶ್ ಶೆಣೈ ನಿರೂಪಿಸಿದರು.

ಕಾರ್ಯದರ್ಶಿ ಜಗದೀಶ್, ಖಜಾಂಚಿ ಹೆಚ್.ವಿ. ಮಂಜುನಾಥ ಸ್ವಾಮಿ, ಸಂಸ್ಥಾಪಕ ಡಾ. ಬಿ.ಎಸ್. ನಾಗಪ್ರಕಾಶ್, ಈಶ್ವರಿ ಶಿವಕುಮಾರ್, ಮಲ್ಲಿಕಾರ್ಜುನ್, ಟಿ.ಎಂ. ಪಂಚಾಕ್ಷರಯ್ಯ, ಆರ್.ಟಿ. ಮೃತ್ಯುಂಜಯ, ವಾಸುದೇವ ರಾಯ್ಕರ್, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಉಪಸ್ಥಿತರಿದ್ದರು.

ಗಾಯಕರಾದ ಜಗದೀಶ್, ಶೋಭಾ 'ಜೊತೆಯಲಿ ಜೊತೆಯಲಿ......' ಹಾಡನ್ನು ಹಾಡಿ ರಂಜಿಸಿದರು.

## ಹರಿಹರದಲ್ಲಿ ರಸ್ತೆ ಕಾಮಗಾರಿ ನಡೆಸದಿದ್ದರೆ ಶಾಸಕರ ಮನೆ ಮುಂದೆ ಧರಣಿ

ದಾವಣಗೆರೆ, ಡಿ.16- ಬೀರೂರು-ಸಮ್ಮಸಗಿ ಹೆದ್ದಾರಿ ರಸ್ತೆಯು ಹರಿಹರ ನಗರದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಬಳಿಯ ಜೋಡಿ ಸೇತುವೆ ಸಮೀಪ ಸಂಪೂರ್ಣ ಹಾಳಾಗಿದ್ದು, ಇನ್ನೆರಡು ದಿನದೊಳಗೆ ರಸ್ತೆ ಕಾಮಗಾರಿ ಆರಂಭಿಸಲು ಶಾಸಕರು ಕ್ರಮ ತೆಗೆದುಕೊಳ್ಳದೇ ಇದ್ದರೆ ಶಾಸಕರ ಮನೆ ಮುಂದೆ ಧರಣಿ ನಡೆಸುವುದಾಗಿ ಜಯ ಕರ್ನಾಟಕ ಹರಿಹರ ತಾಲ್ಲೂಕು ಘಟಕ ಎಚ್ಚರಿಸಿದೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಗೋವಿಂದ ಎಸ್., ಅಂದಾಜು 250 ಮೀಟರ್ ರಸ್ತೆ ಅಭಿವೃದ್ಧಿ ಪಡಿಸಲು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಶಾಸಕರು, ರಾಜಕೀಯ ಮುಖಂಡರು ಹಿಂದೇಟು ಹಾಕುತ್ತಿರುವುದಕ್ಕೆ ಕಾರಣವೇನು ಎಂದು ತಿಳಿಯುತ್ತಿಲ್ಲ.

ಶಾಸಕ ಬಿ.ಪಿ. ಹರೀಶ್, ರಸ್ತೆ ದುರಸ್ತಿ ವಿಷಯದಲ್ಲಿ ರಾಜಕೀಯ ಹಸ್ತಕ್ಷೇಪ ನಡೆಸುತ್ತಿದ್ದಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ರಸ್ತೆ ಕಾಮಗಾರಿ ಆರಂಭಿಸಬೇಕು ಎಂದವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಎಲ್.ಸಿ. ನೀಲಗಿರಿ, ಪದಾಧಿಕಾರಿಗಳಾದ ಎಂ.ಆರ್. ಆನಂದ್, ಹೆಚ್.ಪಿ. ಶ್ರೀನಿವಾಸ್, ಶಿವಶಕ್ತಿ ಪ್ರದೀಪ್, ಆರ್.ಆನಂದ ಉಪಸ್ಥಿತರಿದ್ದರು.

## ಸಿದ್ದವೀರಪ್ಪ ಬಡಾವಣೆಯಲ್ಲಿ ಕಾರ್ತಿಕ



ದಾವಣಗೆರೆ,ಡಿ.16- ಸಿದ್ದವೀರಪ್ಪ ಬಡಾವಣೆಯ ಉದ್ಯಾನವನದಲ್ಲಿ ಬನ್ನಿಮಹಾಂಕಾಳಿ ದೇವರ ಕಾರ್ತಿಕ ದೀಪೋತ್ಸವ ನಡೆಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಗೌರಮ್ಮ ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು

ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ ತಾಲ್ಲೂಕು ಘಟಕದ ವತಿಯಿಂದ ಗೌರಿಶಂಕರ ನಗರದ ನಿವೃತ್ತ ನೌಕರರ ಸಂಘದ ಆವರಣದಲ್ಲಿ ಇಂದು ಬೆಳಗ್ಗೆ 10.30ಕ್ಕೆ ಪಿಂಚಣಿದಾರರ ದಿನಾಚರಣೆ ಏರ್ಪಡಿಸಲಾಗಿದೆ. ಶಾಸಕ ಪ್ರಕಾಶ ಕೋಳಿವಾಡ ಉದ್ಘಾಟಿಸುವರು. ನಿವೃತ್ತ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ವಿ.ಎಂ. ಕರ್ಜಗಿ ಅಧ್ಯಕ್ಷತೆ ವಹಿಸುವರು. ಲಯನ್ಸ್ ಕ್ಲಬ್ ಅಧ್ಯಕ್ಷ ಪ್ರಭುಲಿಂಗಪ್ಪ ಹಲಗೇರಿ, ಎಸ್.ಎಂ.ಸಂಕಮ್ಮನವರ ಅತಿಥಿಗಳಾಗಿ ಆಗಮಿಸುವರು.

## ಮಹಿಳೆ ವಿವಸ್ತ್ರ : ಲೇಖಕಿಯರ ಸಂಘ ಖಂಡನೆ

ದಾವಣಗೆರೆ, ಡಿ. 16 - ಬೆಳಗಾವಿಯ ವಂಟಮೂರಿ ಗ್ರಾಮದಲ್ಲಿ ಈಚೆಗೆ ನಡೆದಿರುವ ದುರ್ಘಟನೆ ಸ್ತ್ರೀ ಕುಲಕ್ಕೆ ಮಾಡಿದ ದೊಡ್ಡ ಅಪಮಾನ ಎಂದು ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀಮತಿ ವೀಣಾ ಕೃಷ್ಣಮೂರ್ತಿ ಹೇಳಿದ್ದಾರೆ.

ಅಮಾನವೀಯವಾಗಿ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ, ದೌರ್ಜನ್ಯ ನಡೆಸಿದ ಪ್ರಕರಣವು ಎಲ್ಲಾ ಮಹಿಳೆಯರಿಗೂ ಮಾಡಿದ ದೊಡ್ಡ ಅವಮಾನ. ಎಲ್ಲಾ ಮಹಿಳೆಯರು ಅತ್ಯಾಚಾರ, ಅನಾಚಾರವನ್ನು ಮತ್ತು ಅವ್ಯಾಹತವಾಗಿ ನಡೆಯುತ್ತಿರುವ ಹೆಣ್ಣು ಭ್ರೂಣ ಹತ್ಯೆಯನ್ನು ಸಂಘಟಿತರಾಗಿ ಖಂಡಿಸಬೇಕು ಎಂದು ಅವರು ಕರೆ ನೀಡಿದ್ದಾರೆ.

ಸಂಘದ ಸದಸ್ಯರುಗಳಾದ ಶ್ರೀಮತಿ ಮಂಜುಳ ಮಂಜಪ್ಪ, ಕೆ.ಜಿ. ಸರೋಜ ನಾಗರಾಜ್, ಹರಿಹರದ ರತ್ನಾ ಸಾಲಿಮಠ, ಹೆಚ್. ಟಿ ರಾಧ, ರೇಣುಕಾ, ಬೆಳಗಾವಿಯ ಜ್ಯೋತಿ ಬದಾಮಿ, ದಾವಣಗೆರೆಯ ಡಾ. ರೂಪಶ್ರೀ ಶಶಿಕಾಂತ್, ಸುನಿತಾ ಪ್ರಕಾಶ್, ಶೋಭ ರಾಣಿ, ಸುಶೀಲಾ ಬಸವರಾಜ್, ಉಮಾದೇವಿ ಹಿರೇಮಠ್, ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಮಲ್ಲಮ್ಮ ನಾಗರಾಜ್, ನೂರ್ ಜಹಾನ್, ಇಂದಿರಾ ಸಿದ್ದೇಶ್, ಓಂಕಾರಮ್ಮ ರುದ್ರಮುನಿ ಸ್ವಾಮಿ, ಜಯ ಗೌಡ್ರು, ಸೀತಾ ಎಸ್. ನಾರಾಯಣ್, ಅನಿತಾ ದೊಡ್ಡ ಗೌಡರ್ ಮತ್ತು ಗಿರಿಜಾ ಸಿದ್ಧಲಿಂಗಪ್ಪ ಮತ್ತಿತರರು ತೀವ್ರವಾಗಿ ಖಂಡಿಸುತ್ತಾರೆ.

## ನಗರದಲ್ಲಿ ಇಂದು ವಿಕರವೇಯಿಂದ ಕನ್ನಡ ರಾಜ್ಯೋತ್ಸವ

ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಇಂದು ಸಂಜೆ 6 ಗಂಟೆಗೆ ಶಿವಯೋಗಾಶ್ರಮದ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಸುವರ್ಣ ಸಂಭ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಜಿ.ಎಂ. ಸಿದ್ದೇಶ್ವರ, ಶಾಮನೂರು ಶಿವಶಂಕರಪ್ಪ ಅವರು ಭುವನೇಶ್ವರಿ ದೇವಿ ಭಾವಚಿತ್ರ ಅನಾವರಣ ಮಾಡಲಿದ್ದಾರೆ.

ಮುಖ್ಯ ಅತಿಥಿಗಳು :ಅಬ್ದುಲ್ ಜಬ್ಬಾರ್, ಡಾ.ಎಂ.ವಿ. ವೆಂಕಟೇಶ್, ಉಮಾ ಪ್ರಶಾಂತ್, ಎಸ್.ವಿ. ರಾಮಚಂದ್ರ, ವಿನಾಯಕ ಪೈಲ್ವಾನ್, ನಾಗರಾಜ್ ಬಡದಾಳ್, ಇ.ಎಂ. ಮಂಜುನಾಥ ಮತ್ತಿತರೆ ಗಣ್ಯರು. ವೇದಿಕೆ ಅಧ್ಯಕ್ಷ ಕೆ.ಜಿ. ಯಲ್ಲಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಪಕ್ಷಿ ತಜ್ಞ ಡಾ. ಶಿಶುಪಾಲ್, ಎಲ್.ಹೆಚ್. ಅರುಣ್ ಕುಮಾರ್, ಮಲ್ಲಿಕಾರ್ಜುನ್ ಕಬ್ಬೂರು, ಎಂ.ವೈ. ಸತೀಶ್, ಎ. ಯಶವಂತಕುಮಾರ್, ಸತೀಶ್ ಬಡಿಗೇರ್ ಸೇರಿದಂತೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 20 ಸಾಧಕರನ್ನು ಸನ್ಮಾನಿಸಲಾಗುವುದು.

ಟೈಲರ್ಸ್‌ಗಳಿಗೆ ಕಾರ್ಮಿಕ ಕಾರ್ಡುಗಳನ್ನು ವೀಣಾ ಅವರು ವಿತರಣೆ ಮಾಡಲಿದ್ದು, ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ. ಹಾಸ್ಯ ಕಲಾವಿದ ಕೋಗಳಿ ಕೊಟ್ರೇಶ್ ಅವರಿಂದ ಹಾಸ್ಯ ಕಾರ್ಯಕ್ರಮ ಹಾಗೂ ಭಾರತಿ ವಾದ್ಯ ವೃಂದದವರಿಂದ ರಸ ಸಂಜೆ ಕಾರ್ಯಕ್ರಮ ನಡೆಯಲಿದೆ.

# ಮಧುರ ಭಾವನೆಗಳಿದ್ದಾಗ ಮಾತ್ರ ಸುಂದರ ಜೀವನ ಸಾಧ್ಯ : ಹನಗವಾಡಿಯಲ್ಲಿ ತರಳಬಾಳು ಶ್ರೀ



ಮಲೇಬೆನ್ನೂರು, ಡಿ. 16 - ಮಧುರ ಭಾವನೆಗಳು ಇದ್ದಾಗ ಮಾತ್ರ ದಾಂಪತ್ಯ ಜೀವನ ಸುಂದರವಾಗಿರುತ್ತದೆ ಎಂದು ಸಿರಿಗೆರೆ ಬೃಹನ್ಮಠದ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಹನಗವಾಡಿ ಗ್ರಾಮದ ತಾ.ಪಂ. ಮಾಜಿ ಸದಸ್ಯ ಡಿ. ಕುಮಾರ್ ಅವರ ಮನೆಗೆ ಆಗಮಿಸಿ, ನೂತನ ವಧು-ವರರಾದ ಚಂದನಾ-ದರ್ಶನ್ ದಂಪತಿಯನ್ನು ಆಶೀರ್ವದಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಜಗಳವಾಡದ ಗಂಡ-ಹೆಂಡತಿಯರು ಜಗತ್ತಿನಲ್ಲಿಲ್ಲ. ಜಗಳವಾದರೂ ಪರಸ್ಪರ ಪ್ರೀತಿ ಸುಗಂಧದಂತೆ ಇರಬೇಕು. ಪ್ರೀತಿ - ನಂಬಿಕೆ ಇದ್ದಲ್ಲಿ ಹೊಂದಾಣಿಕೆಯ ಜೀವನ ಇರುತ್ತದೆ. ಗಂಡ-ಹೆಂಡರ ಸಂಬಂಧ ಮೊಬೈಲ್ ತರ ಯಾವಾಗಲೂ ಸಂಪರ್ಕದಲ್ಲಿರಬೇಕೆಂದ ಶ್ರೀಗಳು, ಬದುಕಿನಲ್ಲಿ ತ್ಯಾಗ, ಅರ್ಪಣೆಯ ಮನೋಭಾವನೆ ಬೆಳೆಸಿಕೊಂಡರೆ ಆದರ್ಶ ಬದುಕು ನಿಮ್ಮದಾಗುತ್ತದೆ ಎಂದು ಭಕ್ತರಿಗೆ ತಿಳಿಸಿದರು.

ಹೆಚ್. ಸಿದ್ದವೀರಪ್ಪನವರಂತಹ ಅಪರೂಪದ ರಾಜಕಾರಣಿಯನ್ನು ಹೊಂದಿದ್ದ ಈ ಹನಗವಾಡಿ ಗ್ರಾಮ ಮೊದಲಿನಿಂದಲೂ ಮಠದ ಸಂಪರ್ಕದಲ್ಲಿ ಬೆಳೆದು ಬಂದಿದ್ದು, ಇಲ್ಲಿನ ಜನರು ಮಠ ಹಾಗೂ ಗುರುಗಳ ಬಗ್ಗೆ ಅಪಾರ ಭಕ್ತಿ ಹೊಂದಿದ್ದಾರೆ. ಗುರುಗಳ ಆದೇಶವನ್ನು ಪಾಲಿಸುತ್ತಾ ಬಂದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು, ಹಿರಿಯರು ಕಟ್ಟಿ ಬೆಳೆಸಿದ ಸಮಾಜವನ್ನು ನೀವು ನಾವೆಲ್ಲರೂ ಸೇರಿ ಮುನ್ನೆಡೆಸೋಣ ಎಂದು ಕರೆ ನೀಡಿದರು.

ಶ್ರೀಮತಿ ಲಲಿತಮ್ಮ ಕೊಂಡಿ, ನಾಗರಾಜಪ್ಪ, ಶ್ರೀಮತಿ ಸುಜಾತ ಡಿ. ಕುಮಾರ್, ಶ್ರೀಮತಿ ವನಜಾಕ್ಷಿ ರೇವಣೇಶ್ ಆಲದಕಟ್ಟೆ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಡಿ. ಶರತ್, ಡಿ. ವರುಣ್, ಗ್ರಾಮದ ಹಿರಿಯರಾದ ಎ. ಶರಣಪ್ಪಯ್ಯ, ವಕೀಲ ಮಂಜುನಾಥ್ ದೊಡ್ಡಮನಿ, ಡಿ. ನಾಗರಾಜಪ್ಪ, ಸಾರಥಿ ಮಂಜುನಾಥ್, ಅಂಗಡಿ ವಾಮದೇವಪ್ಪ, ಛೇರ್ಮನ್ ವಿಜಯಕುಮಾರ್, ಬೆಳಕೆರೆ ಸಿದ್ದೇಶ್, ಎ.ಬಿ. ಮಂಜುನಾಥ್, ಆರ್. ಟಿ. ವಿಜಯಕುಮಾರ್, ಹೊಸಳ್ಳಿ ಬಸವರಾಜ್, ಬೆಳ್ಳೂಡಿ ಸಿದ್ದಾರ್ಥ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ನಗರಕ್ಕೆ ಇಂದು 'ಭಗೀರಥ ಭಾರತ ಜನಕಲ್ಯಾಣ ರಥ'



ಭಗೀರಥ ಭಾರತ ಜನಕಲ್ಯಾಣ ರಥಯಾತ್ರೆ ಇಂದು ನಗರಕ್ಕೆ ಆಗಮಿಸುತ್ತಿದ್ದು, ಉಪ್ಪಾರ ಸಮಾಜದ ಯುವಕರು ಬೈಕ್ ರ‍್ಯಾಲಿ ಹಾಗೂ ಮಹಿಳೆಯರು ಪೂರ್ಣಕುಂಭ ಹೊತ್ತು ರಥಯಾತ್ರೆಯನ್ನು ಸ್ವಾಗತಿಸಲಾಗುವುದು ಎಂದು ಉಪ್ಪಾರ ನೌಕರರ ಸಂಘದ ರಾಜ್ಯಾಧ್ಯಕ್ಷ ಚಂದ್ರಪ್ಪ ತಿಳಿಸಿದ್ದಾರೆ. ಈಗಾಗಲೇ ರಥಯಾತ್ರೆಗೆ ಗಂಗೋತ್ರಿಯಲ್ಲಿ ಚಾಲನೆ ನೀಡಲಾಗಿದ್ದು ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಹಾಗೂ ವಿವಿಧ ರಾಜ್ಯಗಳ ಮೂಲಕ 'ಭಾರತ ಭಗೀರಥ ಜನಕಲ್ಯಾಣ ರಥಯಾತ್ರೆ' ಸಾಗಿ ಸಮಾಜಕ್ಕೆ ಉಪ್ಪಾರರ ಮಹತ್ವದ ಕೊಡುಗೆಗಳನ್ನು ಸಾರುತ್ತಾ ದೆಹಲಿ ತಲುಪಲಿದೆ.

ದೆಹಲಿಯಲ್ಲಿ ಬೃಹತ್ ಸಮಾವೇಶ ಮಾಡಿ ಉಪ್ಪಾರ ಸಮಾಜದವರನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಿಕವಾಗಿ ಸಮಾಜವನ್ನು ಒಗ್ಗೂಡಿಸುವ ಮೂಲಕ ಎಸ್.ಟಿ.ಗೆ ಸೇರಿಸಲು ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಹಾಗೂ ರಥ ಸಾಗಿ ಬಂದ ರಾಜ್ಯಗಳ ಮೇಲೆ ಒತ್ತಾಯಿಸಲಾಗುವುದು ಎಂದು ಚಂದ್ರಪ್ಪ ವಿವರಿಸಿದ್ದಾರೆ.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ.

ಡಾ. ಮಾವಿಶೆಟ್ಟರ್, ಡಾ. ಕೆ.ಆರ್. ಶರತ್‌ರಾಜ್, ಡಾ. ಸಿ.ಎನ್. ಕೋಟಿಹಾಳ್, ಡಾ. ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ. ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್. ರಂಗರಾಜನ್ ತಪಾಸಣೆ ನಡೆಸುವರು. ಸಂಪರ್ಕಿಸಿ : 63631 51534.

KJS ಸುವರ್ಣಾವಕಾಶ
ನಗರ/ಗ್ರಾಮೀಣ ಪ್ರದೇಶದ ಪದವೀಧರ ಯುವಕ-ಯುವತಿಯರಿಗೆ ಕುಮಾರ ಜ್ಯೂಯಲರ್ಸ್‌ನಲ್ಲಿ ಕೆಲಸ ಮಾಡಲು ಸುವರ್ಣಾವಕಾಶ. ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಆಸಕ್ತರು ಸೂಕ್ತ ಪರಿಚಯಸ್ಥರೊಂದಿಗೆ ಸಂಪರ್ಕಿಸಿ.
ಕುಮಾರ ಜ್ಯೂಯಲರ್ಸ್
ಮಂಡಿಪೇಟೆ, ದಾವಣಗೆರೆ.
7536 916 916, 99640 88991



## ಉಕ್ಕಡಗಾತ್ರಿ : ಇಂದು ಅಜ್ಜಯ್ಯನ ಕಾರ್ತಿಕೋತ್ಸವ



ಸುಕ್ಷೇತ್ರ ಉಕ್ಕಡಗಾತ್ರಿ ಗ್ರಾಮದಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಕಾರ್ತಿಕೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಇಂದಿನಿಂದ ಜರುಗಲಿವೆ.

ಬೆಳಿಗ್ಗೆ 4.30ಕ್ಕೆ ಅಜ್ಜಯ್ಯನ ಗದ್ದಿಗೆಗೆ ಮಹಾರುದ್ರಾಭಿ ಷೇಕ, ನಂತರ ಬೆಳಿಗ್ಗೆ 10 ಗಂಟೆಯಿಂದ ಅಜ್ಜಯ್ಯನ ಬೆಳ್ಳಿ ರಥೋತ್ಸವ ನಡೆಯಲಿದ್ದು, ಸಂಜೆ 6 ಗಂಟೆಗೆ ತುಂಗಭದ್ರಾ ಆರತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇದೇ ದಿನ ಬೆಳಿಗ್ಗೆ 11 ಗಂಟೆಗೆ ರಾಜ್ಯಮಟ್ಟದ ಭಜನಾ ಸ್ಪರ್ಧೆಯನ್ನು ಏರ್ಪಡಿಸಿದ್ದು, 25 ಸಾವಿರ ರೂ. ಪ್ರಥಮ ಮತ್ತು 15 ಸಾವಿರ ರೂ. ದ್ವಿತೀಯ ಬಹುಮಾನ ಹಾಗೂ 10 ಸಾವಿರ ರೂ. ತೃತೀಯ ಬಹುಮಾನದೊಂದಿಗೆ ವಿಜೇತರಿಗೆ ಗೌರವ ಸಲ್ಲಿಸಲಾಗುವುದೆಂದು ಗದ್ದಿಗೆ ಟ್ರಸ್ಟ್ ಕಾರ್ಯದರ್ಶಿ ಎಸ್. ಸುರೇಶ್ ತಿಳಿಸಿದ್ದಾರೆ.

## ದೇವರಹಟ್ಟಿ: ನಾಳೆ ಬಸವಣ್ಣ ಕಾರ್ತಿಕ



ದಾವಣಗೆರೆ, ಡಿ. 16 - ತಾಲ್ಲೂಕಿನ ದೇವರ ಹಟ್ಟಿ ಗ್ರಾಮದ ಶ್ರೀ ದೇವರಹಟ್ಟಿ ಬಸವಣ್ಣನ ದೇವ ಸ್ಥಾನದಲ್ಲಿ ನಾಡಿದ್ದು ದಿನಾಂಕ 18ರ ಸೋಮವಾರ ಕಾರ್ತಿಕೋತ್ಸವ ಏರ್ಪ ಡಿಸಲಾಗಿದ್ದು, ರಾತ್ರಿ 7 ಗಂಟೆಯಿಂದ ವಿಶೇಷ ಪೂಜೆ, ಮಹಾ ಮಂಗಳಾರತಿ, ಪಳಾರ ವಿನಿಯೋಗ ನಡೆಯಲಿದೆ.

## ಕೇರಳದಲ್ಲಿ ಕೊರೊನಾ ಹೆಚ್ಚಳ : ಅಣಕು ಸಿದ್ಧತಾ ಪರೀಕ್ಷೆಗೆ ನಿರ್ಧಾರ

ಬೆಂಗಳೂರು, ಡಿ. 16 – ಕೇರಳದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಆಸ್ಪತ್ರೆಗಳಲ್ಲಿ ಅಣಕು ಸಿದ್ಧತಾ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮಂಗಳವಾರ ದಂದು ಕೊರೊನಾ ತಾಂತ್ರಿಕ ಸಲಹಾ ಸಮಿತಿಯ ಸಭೆಯನ್ನೂ ಕರೆಯಲಾಗಿದೆ.

ಕರ್ನಾಟಕ ವೈದ್ಯಕೀಯ ಪೂರೈಕೆ ನಿಗಮದ ಮೂಲಕ ಪರೀಕ್ಷಾ ಕಿಟ್‌ಗಳ ಖರೀದಿಗೆ ಸೂಚನೆ ನೀಡಲಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿದ ನಂತರ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಐ.ಸಿ.ಯು. ಬೆಡ್, ಆಕ್ಸಿಜನ್ ಹಾಗೂ ಔಷಧಿಗಳ ಲಭ್ಯತೆ ಪರಿಶೀಲನೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳ ಪರಿಶೀಲನೆಗಾಗಿ ಅಣಕು ಅಭಿಯಾನ ನಡೆಸುವಂತೆ ತಿಳಿಸಲಾಗಿದೆ. ಪರಿಸ್ಥಿತಿ ಕಳವಳ ಕಾರಿಯೇನೂ ಇಲ್ಲ. ಆದರೆ, ಕೊರೊನಾ ಪರಿಸ್ಥಿತಿ ಮರುಕಳಿಸಿದರೆ ಸನ್ನದ್ಧವಾಗಿರಬೇಕಿದೆ ಎಂದು ರಾವ್ ಹೇಳಿದ್ದಾರೆ.

## ಸಾವರಿನ್ ಗೋಲ್ಡ್ ಬಾಂಡ್ ಹೂಡಿಕೆ ಸೇವೆ

ದಾವಣಗೆರೆ, ಡಿ.16- ಕೇಂದ್ರ ಸರ್ಕಾರದ ಪರ ವಾಗಿ ಆರ್‌ಬಿಐ ನೀಡುವ ಸಾವರಿನ್ ಗೋಲ್ಡ್ ಬಾಂಡ್ ಹೂಡಿಕೆ ಯೋಜನೆಯು ಭದ್ರತೆಯನ್ನು ಖಾತ್ರಿಪಡಿಸುವುದು ಮಾತ್ರವಲ್ಲದೇ ಲಾಭದಾಯಕ ಆದಾಯ ಗಳಿಸಲು ಸಹಕಾರಿ ಯಾಗಿದ್ದು, ಸಾರ್ವಜನಿಕರು ಹೂಡಿಕೆ ಮಾಡಲು ನಾಡಿದ್ದು ದಿನಾಂಕ 18 ರಿಂದ 22 ರವರೆಗೆ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿ ಅಥವಾ ಜಿಲ್ಲಾ ಪ್ರಧಾನ ಅಂಚೆ ಕಚೇರಿ ಮಾರುಕಟ್ಟೆ ಅಧಿಕಾರಿ ಸಂತೋಷ್.ಬಿ (8861126883) ಸಂಪರ್ಕಿಸಲು ಜಿಲ್ಲಾ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

## ಕದರಮಂಡಲಗಿ : ಇಂದು ತೆಪ್ಪೋತ್ಸವ



ರಾಣೇಬೆನ್ನೂರು ತಾಲ್ಲೂಕಿನ ಸುಕ್ಷೇತ್ರ ಕದರಮಂಡಲಗಿ ಶ್ರೀ ಆಂಜನೇಯ (ಕಾಂತೇಶ) ಸ್ವಾಮಿಯ ಮಹಾಕಾರ್ತಿಕೋತ್ಸವದ ಅಂಗವಾಗಿ ಇಂದು ರಾತ್ರಿ 10 .30 ಕ್ಕೆ ತೆಪ್ಪೋತ್ಸವ ನಡೆಯಲಿದೆ.

## ನಗರಕ್ಕೆ ಇಂದು ಭಗೀರಥ ಯಾತ್ರೆ

ಶ್ರೀ ಭಗೀರಥ ಭಾರತ ಜನ ಕಲ್ಯಾಣ ರಥಯಾತ್ರೆ ಇಂದು ಬೆಳಿಗ್ಗೆ 10 ಗಂಟೆಗೆ ನಗರಕ್ಕೆ ಆಗಮಿಸಲಿದೆ ಎಂದು ಜಿಲ್ಲಾ ಭಗೀರಥ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಎನ್. ನಾಗರಾಜ ತಿಳಿಸಿದ್ದಾರೆ.

ರಥಯಾತ್ರೆಯನ್ನು ದೊಡ್ಡಬಾತಿ ಯಿಂದ ಬೈಕ್ ರ್‍ಯಾಲಿ ಮೂಲಕ ಸ್ವಾಗತಿಸಲಾಗುವುದು. ನಂತರ ಬೀರಲಿಂಗೇಶ್ವರ ದೇವಸ್ಥಾನ ದಿಂದ ಮೆರವಣಿಗೆ ಆರಂಭಿಸಿ ಗಾಂಧಿ ವೃತ್ತದ ಮುಖಾಂತರ ವಾಗಿ ಜಯದೇವ ವೃತ್ತದಲ್ಲಿ ಸಮಾವೇಶಗೊಂಡು ಮುಂದಿನ ಜಿಲ್ಲೆಗೆ ಬೀಳ್ಕೊಡಲಾಗುವುದು.

## ನಗರದಲ್ಲಿ ನಾಳೆ ಸಂತೋಷದ ಕಾರ್ಯಾಗಾರ



ದಾವಣಗೆರೆ, ಡಿ.16-ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಡಾ. ಬಾಣಾಪುರಮಠ ಮಕ್ಕಳ ಆಸ್ಪತ್ರೆ 2ನೇ ಮಹಡಿಯಲ್ಲಿ ನಾಡಿದ್ದು ದಿನಾಂಕ 18ರ ಸೋಮವಾರದಿಂದ 23ರವರೆಗೆ ಬೆಳಿಗ್ಗೆ ಮತ್ತು ಸಂಜೆ 2 ಬ್ಯಾಚುಗಳಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 99005 01877, 77601 55659.


ಶ್ರೀ ಸುಬ್ರಮಣ್ಯ ಸ್ವಾಮಿ ಸೇವಾ ಸಮಿತಿ ಟ್ರಸ್ಟ್ (ರಿ.),
ಸುಬ್ರಮಣ್ಯ ನಗರ, ಎಸ್.ಎ. ರವೀಂದ್ರನಾಥ್ ಬಡಾವಣೆ
ಲೋಕಿಕೆರೆ ರೋಡ್, ದಾವಣಗೆರೆ-5.

ಸ್ವಸ್ತಿಶ್ರೀ ಶೋಭಕೃತುನಾಮ ಸಂವತ್ಸರದ ದಕ್ಷಿಣಾಯಣ ಮಾರ್ಘಶಿರ ಮಾಸ ಶುಕ್ಲಪಕ್ಷ ಷಷ್ಠಿ
ದಿನಾಂಕ : 18.12.2023ನೇ ಸೋಮವಾರ ಬೆಳಗ್ಗೆ 6.00 ರಿಂದ
ಶ್ರೀ ಸುಬ್ರಮಣ್ಯ ಸ್ವಾಮಿ ಚಂಪಾಷಷ್ಠಿ ಮಹೋತ್ಸವ
ಶ್ರೀ ಸ್ವಾಮಿಗೆ ವಿಶೇಷ ಅಭಿಷೇಕ, ಅರ್ಚನೆ ಹಾಗೂ ಪೂಜಾ ಕಾರ್ಯಕ್ರಮ ಇರುತ್ತದೆ.
ಈ ಎಲ್ಲಾ ಕಾರ್ಯಕ್ರಮದಲ್ಲಿ ಸರ್ವ ಭಕ್ತಾದಿಗಳು ಭಾಗವಹಿಸಿ ತನು, ಮನ-ಧನ, ಸಹಾಯ ಮಾಡಿ, ಶ್ರೀ ಸ್ವಾಮಿ ಕೃಪೆಗೆ ಪಾತ್ರರಾಗಲು ವಿನಂತಿ.
ಪ್ರಸಾದ ವ್ಯವಸ್ಥೆ ಇರುತ್ತದೆ... ಸರ್ವರಿಗೂ ಆದರದ ಸ್ವಾಗತ



॥ ಶ್ರೀ ದೇವರಹಟ್ಟಿ ಬಸವಣ್ಣ ಪ್ರಸನ್ನ ॥
ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್ (ರಿ.)
ದೇವರಹಟ್ಟಿ ಗ್ರಾಮ, ದಾವಣಗೆರೆ ತಾಲ್ಲೂಕು, ಜಿಲ್ಲೆ

ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ದೇವರಹಟ್ಟಿ ಗ್ರಾಮದಲ್ಲಿರುವ ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್, ದೇವರಹಟ್ಟಿ (ರಿ.ನಂ. 351/2018-19) ಇವರ ವತಿಯಿಂದ ಶ್ರೀ ದೇವರಹಟ್ಟಿ ಬಸವಣ್ಣ ಕಾರ್ತಿಕ ಮಹೋತ್ಸವವನ್ನು ಯಾವಾಗಲೂ ದೀಪಾವಳಿ ಅಮವಾಸ್ಯೆಯಿಂದ ಮುಂದಿನ ಅಮಮಾಸ್ಯೆ ಆದ ಮೇಲೆ ಹುಣ್ಣಿಮೆ ಒಳಗೆ ಒಂದು ಸೋಮವಾರ ಪದ್ಧತಿ ಪ್ರಕಾರ ಕಾರ್ತಿಕ ಮಹೋತ್ಸವವನ್ನು ಆಚರಿಸುತ್ತಿದ್ದು, ಅದೇ ಪ್ರಕಾರ ಈಗಲೂ ಸಹ ನಾಳೆ
ದಿನಾಂಕ 18-12-2023 ನೇ ಸೋಮವಾರದಂದು
ರಾತ್ರಿ 9-00 ಗಂಟೆಗೆ ದೇವರಹಟ್ಟಿ ಶ್ರೀ ಬಸವಣ್ಣನ ಕಾರ್ತಿಕ ಮಹೋತ್ಸವವು ನಡೆಯಲಿದೆ. ಸರ್ವ ಭಕ್ತಾದಿಗಳು ಆಗಮಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್‌ನವರು ವಿನಂತಿಸಿದ್ದಾರೆ.



ದಯೋಗಿ ಅಡ್ವೆಂಚರೈಡ್ಸ್
DAYOGI ADVENTURIDES

ತಮ್ಮ ರಜಾ ಮತ್ತು ಬಿಡುವಿನ ವೇಳೆಯಲ್ಲಿ ನಮ್ಮ ಟ್ರಾವೆಲ್ ಕಂಪನಿ ದಯೋಗಿ ಅಡ್ವೆಂಚರೈಡ್ಸ್ (DAYOGI ADVENTURIDES) ಮೂಲಕ ಪ್ರವಾಸ ಕೈಗೊಂಡು, ಜಗತ್ತಿನಾದ್ಯಂತ ಹೊಸ ಸ್ಥಳಗಳು, ಜನ, ಸಂಸ್ಕೃತಿ ಮತ್ತು ಆಹಾರವನ್ನು ಅನ್ವೇಷಿಸುವುದರ ಜೊತೆಗೆ ಸಾಹಸ ಕ್ರೀಡೆಗಳು, ಬೈಕ್ ಮತ್ತು SUV ಮೂಲಕ ಲಡಾಖ್‌ಗೆ ರಸ್ತೆ ಪ್ರವಾಸದ ಅನುಭವವನ್ನು ಪಡೆದಿದ್ದೀರೆಂದು ಭಾವಿಸುತ್ತೇವೆ. ಕುಟುಂಬ/ಸ್ನಾತಕ ಪ್ರವಾಸಗಳನ್ನು (ಅಂತರರಾಷ್ಟ್ರೀಯ ಮತ್ತು ದೇಶೀಯ) ಆಯೋಜಿಸುವ ಮೂಲಕ ತಮ್ಮ ಜೀವನಾನುಭವವನ್ನು ವರ್ಣಮಯ ಗೊಳಿಸುವುದು ನಮ್ಮ ಕಂಪನಿಯ ಗುರಿ.
ಇಲ್ಲಿಯವರೆಗೂ ನಮಗೆ ಸೇವೆಯ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.
ನಮ್ಮ ವೃತ್ತಿಪರ ಕೌಶಲ್ಯದಿಂದ ಪ್ರವಾಸದ ದೃಷ್ಟಿಕೋನವನ್ನು ಬದಲಾಯಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಸೇವೆ ಮಾಡುವ ಬಯಕೆ ನಮ್ಮದು. ತುಲನಾತ್ಮಕವಾಗಿ ಕಡಿಮೆ ಅವಧಿಯಲ್ಲಿ ನಾವು ದಾವಣಗೆರೆ ಅತಿದೊಡ್ಡ ಟ್ರಾವೆಲ್ ಕಂಪನಿಯಾಗಿ ಬೆಳೆದಿದ್ದೇವೆ.
ಬುಕಿಂಗ್‌ಗಾಗಿ ದಯವಿಟ್ಟು ಸಂಪರ್ಕಿಸಿ : ಹೃದಯ ಸರ್ವದೆ: 82964 65648
S.J.J.M ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ. 577 004



KAVERI MICROTECK (P) LTD.,
Doggalli Compound, K.R. Road, Davangere. Ph. : 9448283202
REQUIRED
One of the fastest emerging organization headquartered in Davangere requires the following personnel for their branch operations.
Jr. ACCOUNTANT
(With min. 3 years experience in Accounts)
Qualification: B.Com/B.B.M.
GODOWN SUPERVISOR
(With min. 3 years experience in physical stock handling)
Qualification: Any Degree
Interested and eligible candidates are requested to send their CVs on davangere@kaveritmicroteck.in by 23rd Dec, 2023. Applications received after the deadline will not be considered. Only shortlisted candidates will be called for interview.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 3 ನೇ ವಾರ್ಡಿನಲ್ಲಿ ಮಹಾನಗರ ಪಾಲಿಕೆ ವತಿಯಿಂದ
ಸಿ.ಸಿ ರಸ್ತೆ ಹಾಗೂ ಒಳ ಚರಂಡಿ ಅಭಿವೃದ್ಧಿ ಕಾಮಗಾರಿಗೆ
ಭೂಮಿ ಪೂಜೆ ಸಮಾರಂಭ
ಎ.ಬಿ ರಹೀಮ್
ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.
ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪನವರು
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಇವರಿಂದ

| | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1) | ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 3ನೇ ವಾರ್ಡ್‌ನ ಬೀಡಿ ಲೇಔಟ್ 1ನೇ ಮೇನ್‌ನಲ್ಲಿ ಬರುವ 3ನೇ ಕ್ರಾಸ್, 4ನೇ ಕ್ರಾಸ್, 5ನೇ ಕ್ರಾಸ್ ಮತ್ತು ಪೊಲೀಸ್ ಠಾಣೆ ಹಿಂಭಾಗದಲ್ಲಿ ಸಿ.ಸಿ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಬೀಡಿ ಲೇಔಟ್ 2ನೇ ಮೇನ್‌ನಲ್ಲಿ ಬರುವ 2ನೇ ಕ್ರಾಸ್‌ನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. | 53.77 |
| 2) | ವಾರ್ಡ್ ನಂ. 3ರ ಬೀಡಿ ಲೇಔಟ್ 1ನೇ ಮೇನ್, 8ನೇ ಕ್ರಾಸ್ ಮತ್ತು 9ನೇ ಕ್ರಾಸ್‌ಗಳಲ್ಲಿ ಬರುವ ಅಡ್ಡ ರಸ್ತೆಗಳಲ್ಲಿ ಸಿ.ಸಿ. ರಸ್ತೆ ಕಾಮಗಾರಿ. | 12.00 |
| 3) | ವಾರ್ಡ್ ನಂ. 3 ಮಾಗಾನಹಳ್ಳಿ ರಸ್ತೆ ಆಯೇಶ ಶಾದಿ ಮಹಲ್ ಎದುರು ಹಾಗು ಬಿಡಿ ಲೇಔಟ್ ಜಂಡೆಕಟ್ಟೆ ರಸ್ತೆಯಲ್ಲಿ ಒಳಚರಂಡಿ ಅಭಿವೃದ್ಧಿ ಕಾಮಗಾರಿ. | 20.00 |

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ಮಹಾಪೌರರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಎಲ್ಲಾ ಸದಸ್ಯರು, ಆಯುಕ್ತರು, ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯಪೂರ್ವಕ ಸ್ವಾಗತ, ಸುಸ್ವಾಗತ
ಸ್ಥಳ : ಬೀಡಿ ಲೇಔಟ್, 6ನೇ ಕ್ರಾಸ್, ದಾವಣಗೆರೆ.
ದಿನಾಂಕ : 17.12.2023 ಭಾನುವಾರ , ಸಮಯ : ಮಧ್ಯಾಹ್ನ : 12 ಗಂಟೆಗೆ
ಪ್ರಕಟಣೆ : 3ನೇ ವಾರ್ಡ್‌ನ ಸಮಸ್ತ ಜನತೆ



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 4 ನೇ ವಾರ್ಡಿನಲ್ಲಿ ಮಹಾನಗರ ಪಾಲಿಕೆ ವತಿಯಿಂದ ಸಿ.ಸಿ ಚರಂಡಿ ಅಭಿವೃದ್ಧಿ ಕಾಮಗಾರಿಗೆ
ಭೂಮಿ ಪೂಜೆ ಸಮಾರಂಭ
ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪನವರು
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಇವರಿಂದ

| | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1) | ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 4ನೇ ವಾರ್ಡ್‌ನ ಭಾಷಾನಗರ 14ನೇ ಕ್ರಾಸ್‌ನಲ್ಲಿ ಸಿ.ಸಿ. ಚರಂಡಿ ಅಭಿವೃದ್ಧಿ ಕಾಮಗಾರಿ. | 28.44 |
| 2) | ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 4ನೇ ವಾರ್ಡ್‌ನ ಭಾಷಾನಗರ 15ನೇ ಕ್ರಾಸ್‌ನಲ್ಲಿ ಸಿ.ಸಿ. ಚರಂಡಿ ಅಭಿವೃದ್ಧಿ ಕಾಮಗಾರಿ. | 28.44 |
| 3) | ವಾರ್ಡ್ ನಂ. 4 ಭಾಷಾನಗರ, 15ನೇ ಕ್ರಾಸ್ ಹಾಗೂ 14 ನೇ ಕ್ರಾಸ್‌ನಲ್ಲಿ ಒಳಚರಂಡಿ ಅಭಿವೃದ್ಧಿ ಕಾಮಗಾರಿ. | 12.50 |
| 4) | ವಾರ್ಡ್ ನಂ. 4 ಶಿವನಗರ, 2ನೇ ಕ್ರಾಸ್‌ನಲ್ಲಿ ಎರಡು ಬದಿ ಸಿ.ಸಿ. ಚರಂಡಿ ಅಭಿವೃದ್ಧಿ ಕಾಮಗಾರಿ. | 15.62 |

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ಮಹಾಪೌರರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಎಲ್ಲಾ ಸದಸ್ಯರು, ಆಯುಕ್ತರು, ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ
ಹೃದಯಪೂರ್ವಕ ಸ್ವಾಗತ, ಸುಸ್ವಾಗತ
ಸ್ಥಳ : ಶಿವನಗರ, 2ನೇ ಕ್ರಾಸ್, ದಾವಣಗೆರೆ.
ದಿನಾಂಕ : 17.12.2023 ಭಾನುವಾರ ,
ಸಮಯ : ಮಧ್ಯಾಹ್ನ : 1 ಗಂಟೆಗೆ
ಪ್ರಕಟಣೆ : 4ನೇ ವಾರ್ಡ್‌ನ ಸಮಸ್ತ ಜನತೆ
ಕಬೀರ್ ಖಾನ್
ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 9 ನೇ ವಾರ್ಡಿನಲ್ಲಿ
ಮಹಾನಗರ ಪಾಲಿಕೆ ವತಿಯಿಂದ ಸಿ.ಸಿ. ರಸ್ತೆ ಅಭಿವೃದ್ಧಿ ಕಾಮಗಾರಿಗೆ
ಭೂಮಿ ಪೂಜೆ ಸಮಾರಂಭ
ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪನವರು
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಇವರಿಂದ

| | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1) | ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 9ನೇ ವಾರ್ಡ್‌ನ ಆಜಾದ್ ನಗರ ಮಟನ್ ಗಲ್ಲಿ ಹತ್ತಿರ ಸಿ.ಸಿ. ರಸ್ತೆ ಅಭಿವೃದ್ಧಿ ಕಾಮಗಾರಿ. | 40.00 |

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ಮಹಾಪೌರರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಎಲ್ಲಾ ಸದಸ್ಯರು, ಆಯುಕ್ತರು, ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ
ಹೃದಯಪೂರ್ವಕ ಸ್ವಾಗತ, ಸುಸ್ವಾಗತ
ಸ್ಥಳ : ಆಜಾದ್ ನಗರ, ಮಟನ್ ಗಲ್ಲಿ ಹತ್ತಿರ, ದಾವಣಗೆರೆ.
ದಿನಾಂಕ : 17.12.2023 ಭಾನುವಾರ , ಸಮಯ : ಮಧ್ಯಾಹ್ನ : 2 ಗಂಟೆಗೆ
ಜಾಕೀರ್ ಅಲಿ
ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.
ಪ್ರಕಟಣೆ : 9ನೇ ವಾರ್ಡ್‌ನ ಸಮಸ್ತ ಜನತೆ